ಸಂಪುಟ 01 | ಸಂಚಿಕೆ 157 | ಗುರುವಾರ 30 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಪಶುವೈದ್ಯಕೀಯ ದಿನ**

ಪ್ರತಿ ವರ್ಷ ಏಪ್ರಿಲ್ ಕೊನೆಯ ಶನಿವಾರದಂದು, ಪ್ರಪಂಚದಾದ್ಯಂತ ಜನರು ಪಶುವೈದ್ಯರು ವಹಿಸುವ ಪ್ರಮುಖ ಪಾತ್ರಗಳ ಬಗ್ಗೆ ಜಾಗೃತಿ ಮೂಡಿಸಲು ಒಟ್ಟಾಗಿ ಸೇರುತ್ತಾರೆ. ವಿಶ್ವ ಸಂಸ್ಥೆ ಪ್ರಾಣಿಗಳ ಆರೋಗ್ಯ ಮತ್ತು ವಿಶ್ವ ಪಶುವೈದ್ಯಕೀಯ ಸಂಘಕ್ಕಾಗಿ ಈ ದಿನವನ್ನು ರಚಿಸುತ್ತದೆ.

**2) ಅಂತರರಾಷ್ಟ್ರೀಯ ಜಾಝ್ ದಿನ**

ಪ್ರತಿ ವರ್ಷ ಏಪ್ರಿಲ್ 30 ರಂದು, ಜಾಝ್‌ನ ಮೂಲ ಮತ್ತು ಅದರ ಜಾಗತಿಕ ಪ್ರಭಾವವನ್ನು ಗೌರವಿಸಲು ವಿಶ್ವ ಜಾಝ್ ದಿನವನ್ನು ಆಚರಿಸಲಾಗುತ್ತದೆ. "ಅಮೆರಿಕದ ಶಾಸ್ತ್ರೀಯ ಸಂಗೀತ" ಎಂದು ಕರೆಯಲ್ಪಡುವ ಜಾಝ್, ಒಂದು ಶತಮಾನಕ್ಕೂ ಹೆಚ್ಚು ಹಿಂದೆ ನ್ಯೂ ಓರ್ಲಿಯನ್ಸ್‌ನಲ್ಲಿ ಹುಟ್ಟಿಕೊಂಡಿತು. 2011 ರಲ್ಲಿ, ಗಿಟಿ ಮತ್ತು ಪ್ರಸಿದ್ಧ ಜಾಝ್ ಸಂಗೀತಗಾರ ಹರ್ಬಿ ಹ್ಯಾನ್‌ಕಾಕ್ ಅಂತರರಾಷ್ಟ್ರೀಯ ಜಾಝ್ ದಿನವನ್ನು ಸ್ಥಾಪಿಸಲು ಸಹಕರಿಸಿದರು

## ಸುಭಾಷಿತ

ಯಶಸ್ಸಿನ ಗುಟ್ಟೇನು? ಸೂಕ್ತ ನಿರ್ಧಾರಗಳು.
ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವುದು ಹೇಗೆ
ಅನುಭವದಿಂದ. ಅನುಭವ ಗಳಿಸುವುದು ಹೇಗೆ
ತಪ್ಪು ನಿರ್ಧಾರಗಳಿಂದ.

–ಎ.ಪಿ.ಜೆ. ಅಬ್ದುಲ್ ಕಲಾಂ

# ನಾಯಕತ್ವ ಕುರಿತು ಸ್ಪಷ್ಟ ನಿರ್ಧಾರ ಕೈಗೊಳ್ಳುವ ಅನಿವಾರ್ಯತೆಯಲ್ಲಿ 'ಕೈ'ಕಮಾಂಡ್



**ಬೆಂಗಳೂರು: ಪಶ್ಚಿಮಬಂಗಾಳದ ಎರಡನೇ ಹಂತದ ಮತದಾನದ ಮೂಲಕ ಪಂಚರಾಜ್ಯಗಳ ವಿಧಾನಸಭೆ ಚುನಾವಣೆ ಪ್ರಕ್ರಿಯೆ ಮುಕ್ತಾಯವಾಗಿದ್ದು, ಇನ್ನು ಮುಂದೆ ಕಾಂಗ್ರೆಸ್ ಹೈಕಮಾಂಡ್‌ಗೆ ರಾಜ್ಯ ರಾಜ–ಕಾರಣಕ್ಕೆ ಸಂಬಂಧಪಟ್ಟಂತೆ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲೇಬೇಕಾದ ಅನಿವಾರ್ಯತೆ ಎದುರಾಗಿದೆ.**

ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಚುನಾವಣಾ ಪ್ರಚಾರದ ಕಾರ್ಯ ಒತ್ತಡದಲ್ಲಿದ್ದರು. ಈ ಕಾರಣಕ್ಕೆ ರಾಜ್ಯದಿಂದ ತೆರಳುವ ಶಾಸಕರು, ಸಚಿವರ ನಿಯೋಗಕ್ಕೆ ಸಮಯ ನೀಡಲು ಸಾಧ್ಯವಾಗಿರಲಿಲ್ಲ. ಈಗ ಎಲ್ಲಾ ಚುನಾವಣೆಗಳು ಮುಕ್ತಾಯವಾಗಿವೆ. ರಾಹುಲ್ ಗಾಂಧಿ ದೆಹಲಿಗೆ ಮರಳಿದ್ದಾರೆ. ಶೀಘ್ರವೇ ವಿದೇಶಕ್ಕೆ ತೆರಳಲಿದ್ದಾರೆ ಎಂದು ಹೇಳಲಾಗುತ್ತಿದ್ದು, ಅದಕ್ಕೂ ಮುನ್ನ ಕರ್ನಾಟಕದ ನಾಯಕತ್ವ ಬದಲಾವಣೆ ಅಥವಾ ಸಚಿವ ಸಂಪುಟ ಪುನರ್‌ರಚನೆ ಕುರಿತಂತೆ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕಿದೆ.

ನಾಯಕತ್ವ ಬದಲಾವಣೆ ರಾಹುಲ್‌ಗಾಂಧಿ ಅವರಿಗೆ ಇಷ್ಟವಿಲ್ಲದೇ ಇರುವ ಕಾರಣಕ್ಕಾಗಿ ಇಲ್ಲಿವರೆಗೂ ಡಿ.ಕೆ.ಶಿವಕುಮಾರ್ ಅವರಿಗೆ ಪ್ರತ್ಯೇಕವಾಗಿ ಭೇಟಿ ಮಾಡಲು ಸಮಯ ನೀಡಿಲ್ಲ. ಆದರೆ ಡಿ.ಕೆ.ಶಿವಕುಮಾರ್ ಪದೇ ಪದೇ ದೆಹಲಿಗೆ ಹೋಗಿ ಒತ್ತಡ ಹಾಕುತ್ತಲೇ ಬಂದಿದ್ದಾರೆ. ಹಲವಾರು ಬಾರಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರನ್ನು ಭೇಟಿ ಮಾಡಿ, ತಮ ಅಹವಾಲನ್ನು ಹೇಳಿಕೊಂಡಿದ್ದಾರೆ. ಆದ–'ರೆ ರಾಹುಲ್‌ಗಾಂಧಿ ಅವರ ಭೇಟಿ ಸಾಧ್ಯವಾಗಿಲ್ಲ. ಸಿದ್ದರಾಮಯ್ಯ ಅವರು ರಾಹುಲ್‌ಗಾಂಧಿ ಹೇಳಿದರೆ ಮಾತ್ರ ಕುರ್ಚಿ ಬಿಡುತ್ತೇನೆ ಎಂದಿದ್ದಾರೆ.

ಆ ವಿಚಾರವನ್ನು ವಿವರಿಸಿ ನಾಯಕತ್ವ ಬದಲಾವಣೆಗೆ ಮುನ್ನುಡಿ ಬರೆಯಲು ನಾನಾ ರೀತಿ ಕಸರತ್ತುಗಳಾಗುತ್ತಿವೆ. ಆದರೂ ರಾಹುಲ್ ಗಾಂಧಿ ಭೇಟಿಗೆ ಸಮಯ ನೀಡಿಲ್ಲ. ಮಲ್ಲಿಕಾರ್ಜುನ್ ಖರ್ಗೆ ಅವರು ಪ್ರತಿ ಬಾರಿಯೂ ಡಿ.ಕೆ.ಶಿವಕುಮಾರ್ ಅವರನ್ನು ಸಮಾಧಾನ ಪಡಿಸಿ ಕಳುಹಿಸುತ್ತಿದ್ದಾರೆ. ಆದರೆ ಈ ಭಾರಿ ಕಷ್ಟಸಾಧ್ಯವಾಗುತ್ತಿದೆ. ರಾಹುಲ್ ಗಾಂಧಿ ದೆಹಲಿಗೆ ಮರಳಿರುವುದರಿಂದ ಡಿ.ಕೆ.ಶಿವಕುಮಾರ್ ಈ ವಾರದೊಳಗೆ ಮತ್ತೆ ದೆಹಲಿಗೆ ತೆರಳಲಿದ್ದಾರೆ ಎಂದು ಹೇಳಲಾಗಿದೆ. ಈ ವರೆಗೂ ಚುನಾವಣೆ ಹಾಗೂ ಇತರ ಕಾರ್ಯಗಳ ನೆಪವೊಡ್ಡಿ ಸಮಯ ದೂಡುತ್ತಿದ್ದ ರಾಹುಲ್ ಗಾಂಧಿ, ಈಗ ನಿರ್ಧಾರ ತೆಗೆದುಕೊಳ್ಳಲೇಬೇಕಾದ ಪರಿಸ್ಥಿತಿ ಎದುರಾಗಿದೆ.

ದೆಹಲಿಯಲ್ಲಿ ಬೀಡುಬಿಟ್ಟಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಣದ ಸಚಿವರಾದ ಎಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿಯವರು ಇಂದು ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡುವ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಹೇಳಲಾಗಿದೆ. ಚುನಾವಣೆಯ ಪ್ರಕ್ರಿಯೆಗಳು ಮುಗಿದರೂ ಚುನಾವಣೆ ಫಲಿತಾಂಶ ಬರುವವರೆಗೂ ತಾಳೆಯಿಂದ ಇರುವಂತೆ ಡಿ.ಕೆ.ಶಿವಕುಮಾರ್ ಅವರಿಗೆ ಸಲಹೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

## ನಿನ್ನೆ ಸುರಿದ ಅಕಾಲಿಕ ಮಳೆಗೆ ಸಿಡಿಲು ಬಡಿದು ಐದು ಕುರಿಗಳು ಸಾವು.

**ನೈಜ್ಯ ದೆಸೆ ನ್ಯೂಸ್**

**ಯಾದಗಿರಿ: ಜಿಲ್ಲೆಯ ಹುಣಸಗಿ ತಾಲೂಕಿನ ಶಕಾಪುರ್ (ಎಸ್ ಕೆ) ಗ್ರಾಮದಲ್ಲಿ ಸಿಡಿಲು ಹೊಡೆದು ಐದು ಕುರಿಗಳು ಸಾವನ್ನಪ್ಪಿರುವ ದಾರುಣ್ಯ ಘಟನೆ ನಡೆದಿದೆ. ನಿನ್ನೆ ರಾತ್ರಿ ಸುಮಾರು 10 ಗಂಟೆಗೆ ಬಿರುಗಾಳಿ ಸಹಿತ ಮಳೆಗೆ ಸಿಡಿಲು ಬಡಿದು ಕು–ರಿಗಳು ಸಾವನ್ನಪ್ಪಿರು ಘಟನೆ ಶಕಾಪುರ್ ಗ್ರಾಮದಲ್ಲಿ ನಡೆದಿದೆ.**



ಘಟನೆ ನಡೆದ ಸ್ಥಳಕ್ಕೆ ಬಿಜೆಪಿಯೋ ಮುಖಂಡರಾದ ಕೃಷ್ಣಾರೆಡ್ಡಿ ಮುದನೂರ್ (ಬಿ) ಆಗಮಿಸಿ ರೈತನಿಗೆ ಶಾಂತ್ವಾನ ಹೇಳಿದರು. ಅವರು ಮಾತನಾಡಿ ಸರಕಾರದಿಂದ ಕೂಡಲೇ ರೈತನಿಗೆ ಆಗಿರುತಕ್ಕಂತಹ ನಷ್ಟವನ್ನು ಕೊಡುವ ಕೆಲಸ ಬೇಗನೆ ಆಗಬೇಕು ಎಂದು ಹೇಳಿ ಸರ್ಕಾರಕ್ಕೆ ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಪಶು ಸಂಗೋಪನ ಇಲಾಖೆಯ ಅಧಿಕಾರಿಗಳು ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಹಾಜರಿದ್ದರು.

## ಕೆರೆಯಂತಾದ ರಸ್ತೆ ;ಚರಂಡಿ ಕಾಮಗಾರಿ ಕೈಗೆತ್ತಿಕೊಳ್ಳಲು ಆಗ್ರಹ



**ನೈಜ್ಯ ದೆಸೆ ನ್ಯೂಸ್**

**ಫರಹತಾಬಾದ: ಶರಣನಗರದ ಬೈಪಾಸ್ ರಸ್ತೆಗೆ ಹೊಂದಿಕೊಂಡಿರುವ ಅಂಗನವಾಡಿ ಕಾರ್ಯಕರ್ತೆ ಇಂದಿರಾ ಶರ್ಮಾ ಅವರ ಮನೆ ಮಾರ್ಗವಾಗಿ ಎಂಟತ್ತು ಮನೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಮಂಗಳವಾರ ದಿನಾಂಕ 21–04–2026ರಂದು ಸುರಿದ ಭಾರಿ ಮಳೆಯಿಂದಾಗಿ ಮೊಣಕಾಲು ಮಟ್ಟ ನೀರು ನಿಂತು ಕೆರೆಯಂತಾಗಿದೆ.**

ಮಕ್ಕಳು – ಮಹಿಳೆಯರು – ವಯೋವೃದ್ಧರು ಆ ರಸ್ತೆ ಮಾರ್ಗವಾಗಿ ಸಂಚ–ರಿಸಲು ಆಗದ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೂ ಕೂಡ ಅನಿವಾರ್ಯವಾಗಿ ಕುಡಿಯಲು, ಮನೆ ಬಳಕೆಗಾಗಿ ಗುಮ್ಮಿ(ಮಿನಿ ಟ್ಯಾಂಕ್) ನೀರು ತರಲು ಅದೇ ರಸ್ತೆಯಲ್ಲಿ ಸರ್ಕಸ್ ಮಾಡ್ಕೊಂಡು ತಿರುಗಾಡಬೇಕಾಗಿದೆ ಎಂದು ಸಂತ್ರಸ್ತರು ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಸಲ್ಲಿಸಿದ ಮನವಿ ಪತ್ರದ ಮೂಲಕ ಅಳಲು ತೋಡಿಕೊಂಡಿದ್ದಾರೆ.

ಅಂದಿನಿಂದ ಇಂದಿನವರೆಗೂ ನಿಂತ ನೀರಲ್ಲೇ ಓಡಾಡುವಂತಾಗಿದೆ. ಇದೇ ರೀತಿ ಮುಂದುವರೆದಲ್ಲಿ ನಿಂತ ನೀರಲ್ಲಿ ಸೊಳ್ಳೆಗಳ ಪ್ರಮಾಣ ಹೆಚ್ಚಾಗಿ ಅಕ್ಕಪಕ್ಕದ ಮನೆಯವ–ರಿಗೆ ಸೊಳ್ಳೆಗಳು ಕಚ್ಚಿ ಡೆಂಗ್ಯೂ, ಮಲೇರಿಯಾ, ಆನೇಕಾಲು ರೋಗಗಳು ಹರಡುವ ಭೀತಿ ಎದುರಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಮಾಣಿಕಮ್ಮ ಹೇರೂರು ಅವರ ಮನೆಯಂತೂ ಜಲಾವೃತಗೊಂಡು ಮನೆಯಲ್ಲಿ ವಿದ್ಯುತ್ ಪ್ರವಹಿಸುತ್ತಿದೆ.

ಅವಘಡ ಸಂಭವಿಸುವ ಮುನ್ನ ಎಚ್ಚೆತ್ತು ಶೀಘ್ರದಲ್ಲೇ ಮೋಟಾರ್ ಬಳಸಿ ನೀರು ಖಾಲಿ ಮಾಡಿಸಬೇಕು ಮತ್ತು ಮಳೆಗಾಲ ಆರಂಭವಾಗುವ ಪೂರ್ವದಲ್ಲಿ ಚರಂಡಿ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳುವಂತೆ ಆಗ್ರಹಿಸಿದ್ದಾರೆ. ನಿರ್ಲಕ್ಷ್ಯ ತೋರಿದ್ದಲ್ಲಿ ಗ್ರಾಮ ಪಂಚಾಯತ ಎದುರುಗಡೆ ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದೆಂದು ಮನವಿಪತ್ರದಲ್ಲಿ ತಿಳಿಸಿದ್ದಾರೆ.

## ಕಲ್ಯಾಣ ಕರ್ನಾಟಕಕ್ಕೆ ಇಂದಿರಾ ಕಿಟ್ ಯಾವಾಗ ಯಮನಪ್ಪ ದೊರೆ.

**ನೈಜ್ಯ ದೆಸೆ ನ್ಯೂಸ್**

**ಯಾದಗಿರಿ: ಕಲ್ಯಾಣ ಕರ್ನಾಟಕ ಭಾಗಕ್ಕೆ ಇಂದಿರಾ ಕಿಟ್ಟ ಯಾವಾಗ ಕೊಡುತ್ತದು, ಸರ್ಕಾರ ಅನ್ನೋದು ಸಾರ್ವಜನಿಕ–ರಿಗೆ ಯಕ್ಷಪ್ರಶ್ನೆ ಮೂಡಿದೆ ಎಂದು 2028ರ ಸುರಪುರ ತಾಲೂಕು ಎಂಎಲ್‌ಎ ಆಕಾಂಕ್ಷಿ ಯಮುನಪ್ಪ ದೊರೆ ಸರ್ಕಾರಕ್ಕೆದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.**



ಕಲ್ಯಾಣ ಕರ್ನಾಟಕ ಭಾಗ ಸಾಕಷ್ಟು ಹಿಂದುಳಿದ ಪ್ರದೇಶವಾಗಿದೆ. ಈ ಭಾಗದಲ್ಲಿ ಸಾಕಷ್ಟು ಬಡ ಜನ–ರಿದ್ದಾರೆ. ಬಿಪಿಎಲ್ ಕಾರ್ಡ್ದಾರರು ಮತ್ತು ಹಂತೋದಯ ಕಾರ್ಡ್ ಸಾಕಷ್ಟು ಜನ ಸರಕಾರದ ಇಂದಿರಾ ಕಿಟ್ ಯಾವಾಗ ಬರುತ್ತದೆ ಅಂತ ಕಾಯ್ದುಕೊಳ್ಳುತ್ತಿದ್ದಾರೆ ಅವರಿಗೆ ಸರಕಾರ ಮಲತಾಯಿ ಧೋರಣೆ ತೋರುವುದಿಲ್ಲ. ಇನ್ನು ಮುಂದೆಯಾದರೂ ಸರ್ಕಾರ ಕಲ್ಯಾಣ ಕರ್ನಾಟಕ ಭಾಗದ ಜನರ ಆಸೆಯನ್ನು ಈಡೇರಿಸಬೇಕೆಂದು ಒತ್ತಾಯಿಸಿದರು. ಮತ್ತು ಈ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಕಷ್ಟು ಜನ ಎಂಎಲ್–ಎಗಳು ಕಾಂಗ್ರೆಸ್ ಪಕ್ಷದವರೇ ಇದ್ದಾರೆ.

ಮಾನ್ಯ ಮುಖ್ಯಮಂತ್ರಿಗಳು ಮೂರು ತಿಂಗಳ ಹಿಂದೆಯೇ ಇಂದಿರಾ ಕಿಟ್ ಘೋಷಣೆ ಮಾಡಿದ್ದರು ಘೋಷಣೆ ಮಾಡಿ ಮೂರು ತಿಂಗಳು ಕಳೆದರೂ ಈನ್ನು ಬಿಪಿಎಲ್ ಕಾರ್ಡ್ದಾರರಿಗೆ ಮತ್ತು ಅಂತೋದಯ ಕಾರ್ಡುದಾರ–ರಿಗೆ ಇಂದಿರಾ ಕಿಟ್ ಮುಟ್ಟಿಲ್ಲ. ಸರಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ಮುಂದಿನ ದಿನಗಳಲ್ಲಿ ಇಂದಿರಾ ಕಿಟ್ ಫಲಾನುಭವಿಗಳಿಗೆ ತಲ್ಪಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಸರಕಾರಕ್ಕೆ ಒತ್ತಾಯಿಸಿದರು.

## ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಶೇ.100ರಷ್ಟು ಫಲಿತಾಂಶ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ರಾಯಚೂರಿನ ಆಶಾಪೂರು ರಸ್ತೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಸಾಧಿಸಿದೆ. ಪರೀಕ್ಷೆಗೆ ಹಾಜರಾದ 48 ವಿದ್ಯಾರ್ಥಿಗಳಲ್ಲಿ 14 ಜನ ಅಗ್ರಶ್ರೇಣಿ, 29 ಪ್ರಥಮ ದರ್ಜೆ, 04 ಜನ ದ್ವಿತೀಯ ದರ್ಜೆ ಹಾಗೂ ಒಬ್ಬ ವಿದ್ಯಾರ್ಥಿ ಪಾಸರಾಗಿರುತ್ತಾರೆ.**

ಶಾಲೆಯ ವಿದ್ಯಾರ್ಥಿ ಕು. ನಂದಿನಿ ಅವರು ಶೇ.95.84 ಪ್ರಥ–'ಮ ಸ್ಥಾನ, ಕು.ಭಾಗ್ಯಶ್ರೀ ಶೇ.94.40



ದ್ವಿತೀಯಾ ಸ್ಥಾನ ಹಾಗೂ ಕು.ಅನಿಲ್ ಶೇ.93.76 ತೃತೀಯ ಸ್ಥಾನ ಪಡೆದಿದ್ದು, ಈ ಸಾಧನೆಗೆ ವಿದ್ಯಾರ್ಥಿಗಳು, ಪಾಲಕರು, ಪ್ರಾಂಶುಪಾಲರು, ನಿಲಯ ಪಾಲಕರು, ಭೋದಕ & ಭೋದಕೇತರ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿರುತ್ತಾರೆ ಎಂದು ಶಾಲೆಯ ಪ್ರಾಂಶುಪಾಲರಾದ ಕಲ್ಪನಾ ಎಸ್ ಬಿರಾದಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶ್ವ ಮಲೇರಿಯಾ ದಿನಾಚರಣೆ–ಕಡಿತ ಚಿಕ್ಕದು ಭೀತಿ ದೊಡ್ಡದು.

**ನೈಜ್ಯ ದೆಸೆ ನ್ಯೂಸ್**

**ಸಿಂದನೂರು: ವಿಶ್ವದ ಅತ್ಯಂತ ಅಪಾಯಕಾರಿ ಜೀವಿ ಸಿಂಹವಲ್ಲ, ಚಿರತೆಯೂ ಅಲ್ಲ! ಅದು ಸೊಳ್ಳೆ,!", ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ತಾಲೂಕಾರೋಗ್ಯಾಧಿಕಾ–ರಿಗಳ ಕಾರ್ಯಾಲಯ ಸಿಂಧನೂರ,**

ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಇಂದಿರಾ ನಗರ ಉಪಕೇಂದ್ರದ ,1ಣ ಅಂಗನವಾಡಿ ಕೇಂದ್ರದಲ್ಲಿ ತಾಯಂದಿರ ಸಭೆಯಲ್ಲಿ ತಾಲೂಕಾ ಕಛೇರಿಯ ಆರೋಗ್ಯ ಶಿಕ್ಷಣಾಧಿಕಾರಿಯಾದ ಗೀತಾ ಹಿರೇಮಠ ಮಾತನಾಡಿ ಮಲೇರಿಯಾ ಡೆಂಗ್ಯೂ ಜ್ವರದ ಬಗ್ಗೆ ಸಾರ್ವಜನಿಕರು ಅತಿಯಾದ ಮಾಹಿತಿ ತಿಳಿದು ಕೊಳ್ಳಬೇಕು ಇದರಿಂದ ಯಾವದೇ




ರೋಗದ ಕುರಿತು ಮಾಹಿತಿ ಇದ್ದರೆ ರೋಗಲಕ್ಷಣ ಕುರಿತು ಹಾಗೂ ಕೆಳಗಿನ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳುವುದು ಬಹಳ ಮುಖ್ಯವಾಗಿದೆ. ಮನೆಯ ಸುತ್ತಮುತ್ತಲಿನ ಪರಿಸರದಲ್ಲಿ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು ಹಾಗೂ ಹಳೆಯ ಟೈಯರ್, ಡಬ್ಬಿ ಮತ್ತು ಕುಂಡಳಿಗಳಲ್ಲಿ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಬೇಕು. ನೀರು ಸಂಗ್ರಹಿಸುವ ತೊಟ್ಟಿಗಳನ್ನು ವಾರಕ್ಕೊಮ್ಮೆ



ಕಡ್ಡಾಯವಾಗಿ ಸ್ವಚ್ಛಗೊಳಿಸಿ ಒಣಗಿಸಬೇಕು.

ಜಗತ್ತಿನಲ್ಲಿ ಅತಿ ಹೆಚ್ಚು ಮನುಷ್ಯರನ್ನು ಸಾಯಿಸುವ ಜೀವಿ ಎಂದರೆ ಅದು ಸೊಳ್ಳೆ ವಾರ್ಷಿಕ ಸುಮಾರು 7 ಲಕ್ಷಕ್ಕೂ ಹೆಚ್ಚು ಮಂದಿ ಸೊಳ್ಳೆಗಳಿಂದ ಹರಡುವ ಮಲೇರಿಯಾ ಡೆಂಗು ಮತ್ತು ಚಿಕನ್ ಗುನ್ಯಾ ದಂತಹ ಕಾಯಿಲೆಗಳಿಂದ ಮೃತಪಟ್ಟತ್ತಾರೆ ಗಾತ್ರದಲ್ಲಿ ಚಿಕ್ಕದಾದರೂ ಸಾವಿನ ಸಂಖ್ಯೆಯಲ್ಲಿ ಇದು ಶಾರ್ಕ್ ಅಥವಾ ಹಾವಿಗಿಂತ ನೂರು ಪಟ್ಟು ಹೆಚ್ಚು ಅಪಾಯಕಾರಿ, ಮಲಗುವಾಗ ಕಡ್ಡಾಯವಾಗಿ ಸೊಳ್ಳೆ ಪರದೆಗಳನ್ನು ಬಳಸಬೇಕು ಹಾಗೂ ಸೊಳ್ಳೆ ನಿಯಂತ್ರಣ ಕಿಟಕಿಗಳಿಗೆ ಜಾಲರಿ/ಮೆಸ್ಗಳನ್ನು ಅಳವಡಿಸಬೇಕು ಒಂದು ವೇಳೆ ಜ್ವರ ಅಥವಾ ಮಲೇರಿಯ ಲಕ್ಷಣಗಳಾದ ಚಳಿ ಕೂಡಿದ ಜ್ವರ ವಿಪರೀತ ಬೆವರು ಕೆ ಸ್ನಾಯು ಸೆಳೆತ ಬಿಟ್ಟು ಬಿಟ್ಟು ಬರುವ ಜ್ವರ 1 ರಿಂದ 14 ದಿನದ ಜ್ವರ ದಂತಹ ಲಕ್ಷಣಗಳು ಕಂಡುಬಂದಲ್ಲಿ ವಿಳಂಬ ಮಾಡದೆ.

ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಉಚಿತವಾಗಿ ರಕ್ತಪರೀಕ್ಷೆ ಸಂಪೂರ್ಣ ಚಿಕಿತ್ಸೆ ಪಡೆಯಬೇಕು ತದನಂತರ ಪೌಷ್ಟಿಕ ಆಹಾರ ಗರ್ಭಿಣಿ ಬಾಣಂತಿಯರ ಆರೋಗ್ಯದ ಬಗ್ಗೆ ಮಾಹಿತಿ ನೀಡಲಾಯಿತು ಬಿಸಿಲಿನ ಅತಿಯಾದ ತಾಪಮಾನದಿಂದ ತಪ್ಪಿಸಿಕೊಳ್ಳಲು ಮುಂಜಾಗ್ರತಾ ಕ್ರಮಗಳನ್ನು ತಿಳಿಸಲಾಯಿತು ಸದರಿ ಕಾರ್ಯಕ್ರಮದಲ್ಲಿ ಶಮಿನಬೇಗಂ PHCO, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಗರ್ಭಿಣಿ ತಾಯಂದಿರು, ಸಾರ್ವಜನಿಕರು, ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಹಸಿದ ಹೊಟ್ಟೆಗೆ ಅನ್ನವಾದಳು

ಹೆಣ್ಣಿನ ಸೌಂದರ್ಯ ಕಣ್ಣಿಗೆ ಕಾಣೋ ಚಿತ್ರ ಅಲ್ಲಾ
ಅದು ಮನಸ್ಸಿಗೆ ತಂಪು ಕೊಡೋ ಮಂತ್ರ

ಬೆಳಗ್ಗೆ ಎದ್ದು ಮನೆ ಬೆಳಗೋ ದೀಪ ಅವಳು
ರಾತ್ರಿ ಎಲ್ಲರೂ ಮಲಗಿದ ಮೇಲೆ ಕಾಯೋ ಕಾವಲು ಅವಳು
ಹಸಿದ ಹೊಟ್ಟೆಗೆ ಅನ್ನವಾದಳು, ನೊಂದ ಮನಸ್ಸಿಗೆ ಮದ್ದಾದಳು
ಸೋತಾಗ ಬೆನ್ನು ತಟ್ಟಿ "ನಾನಿದ್ದೀನಿ" ಅಂದ ಸೈನ್ಯ ಅವಳು

ಅವಳ ಕಣ್ಣಲ್ಲಿ ಕಡಲಷ್ಟು ಪ್ರೀತಿ ಇದೆ
ಅವಳ ನಗೆಯಲ್ಲಿ ಮಲ್ಲಿಗೆ ಕಂಪು ಇದೆ
ಅವಳ ಕೈಯಲ್ಲಿ ಅಮ್ಮನ ಮಮತೆ ಇದೆ
ಅವಳ ಹೆಜ್ಜೆಯಲ್ಲಿ ಭೂಮಿಯ ಸಹನೆ ಇದೆ

ಸೀರೆ ಉಟ್ಟರೆ ಸಂಸ್ಕೃತಿಯ ಗೌರವ ಅವಳು
ಸಮವಸ್ತ್ರ ತೊಟ್ಟರೆ ದೇಶದ ಹೆಮ್ಮೆ ಅವಳು
ಜೊತೆಲಿದ್ದು ಜೀವ ಉಳಿಸೋ ದೇವತೆ ಅವಳು
ಮನೆ ಒಳಗೆ ಸಂಸಾರ ತೂಗೋ ಕಂಬ ಅವಳು

ಅವಳ ಸೌಂದರ್ಯ ವಯಸ್ಸಿಗೆ ಸಿಗೋದಲ್ಲ
ಮೇಕಪ್‌ಗೆ ಮೀರಿದ್ದು, ಕ್ಯಾಮೆರಾಗೆ ನಿಲುಕದ್ದು
ಅದು ಅವಳ ನಡೆ-ನುಡಿಯಲ್ಲಿ, ಗುಣ-ನಡತೆಯಲ್ಲಿ
ತ್ಯಾಗದಲ್ಲಿ ಅರಳೋ, ಪ್ರೀತಿಯಲ್ಲಿ ಬೆಳೆಯೋ ಸೌಂದರ್ಯ ಅವಳು

ಎಸ್. ದುರಗಪ್ಪ. ಕುಷ್ಟಗಿ.

# ಆಸ್ತಿಗಾಗಿ ಅಣ್ಣ ತಮ್ಮನ ಗುದ್ದಾಟ 13 ವರ್ಷದ ಬಾಲಕ ಬಲಿ!

ನೈಜ್ಯ ದೆಸೆ ನ್ಯೂಸ್

**ತಾಲೂಕಿನ ಅಲಬನೂರು ಗ್ರಾಮದಲ್ಲಿ ಏ.29 ಬುಧವಾರ ಬೆಳಿಗ್ಗೆ ಸುಮಾರು 8 ಗಂಟೆಗೆ ನಾಗರಾಜ ತಂದೆ ಸಿದ್ದಪ್ಪ (13) ವರ್ಷ ಕೊಲೆಯಾದ ಬಾಲಕ ಸಿದ್ದಪ್ಪ ಹಾಗೂ ಆತನ ತಮ್ಮ ಬಸವರಾಜ ನಡುವೆ ಆಸ್ತಿಗೆ ಸಂಬಂಧಿಸಿದಂತೆ ಆವಾಗವಾಗ ವಾಗ್ವಾದ ನಡೆಯುತ್ತಲೆ ಇತ್ತು.**

ಇದರ ಬಗ್ಗೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ ಎನ್ನಲಾಗಿದೆ. 4 ಎಕರೆಯ ಜಮೀನಿನನಲ್ಲಿ ಇಬ್ಬರಿಗೆ ಸಮನಾಗಿ ಪಾಲು ಕೊಡಲು ಕೊಲೆ ಆರೋಪಿ ತಮ್ಮ ಬಸವರಾಜ ಅಣ್ಣ ಸಿದ್ದಪ್ಪನಿಗೆ ಕೇಳಿದ್ದರು ಸಹ ಪಾಲು ಕೊಡದೇ ಅಣ್ಣ ಸಿದ್ದಪ್ಪ ಸತಾಯಿಸಿದ್ದೆ ಈ ಘಟನೆಗೆ ಕಾರಣವಾಗಿದೆ. ಈ ವಿಚಾರದ ಬಗ್ಗೆ ತುಂಬಾ ವರ್ಷಗಳಿಂದಲೂ ಇಬ್ಬರ ನಡುವೆ ವೈಷಮ್ಯವಿತ್ತು. ಕೊಲೆ ಆರೋಪಿ ಬಸವರಾಜ ಸಿರುಗುಪ್ಪದಲ್ಲಿ ಹೆಂಡತಿ ಮನೆಯಲ್ಲಿ ವಾಸವಾಗಿದ್ದು, ಏ.28 ಮಂಗಳವಾರದಂದು



ಅಲಬನೂರಿಗೆ ಬಂದು, ಆಸ್ತಿ ವಿಷಯಕ್ಕೆ ಗಲಾಟೆ ನಡೆದಿದೆ. ಏ.29 ಬುಧವಾರ ಅಣ್ಣ ಸಿದ್ದಪ್ಪ ಊರಲ್ಲಿರುವ ಮದುವೆಯಲ್ಲಿ ಅಡುಗೆ ಮಾಡಲು ಹೋಗಿದ್ದು, ಅತ್ತಿಗೆ ಹಾಗೂ ಅಣ್ಣನ ಚಿಕ್ಕ ಮಕ್ಕಳು ಮನೆಯಲ್ಲಿದ್ದರು.

ತಮ್ಮ ಬಸವರಾಜ ಅಣ್ಣನ ಮನೆಗೆ ಹೋಗಿ ಅತ್ತಿಗೆಗೆ ಒನಕೆಯಿಂದ ಒಡೆದು ಚಾಕು ಹಾಕಲು ಹೋದಾಗ ತಪ್ಪಿಸಿಕೊಂಡು ಹೋಗಿದ್ದು, ಎದುರಿಗೆ ಬಂದ 13 ವರ್ಷದ ಅಣ್ಣನ ಮಗ ನಾಗಾರಾಜುಗೆ ಚಾಕುವಿನಿಂದ ಇರಿದು ಕೊಲೆ ಮಾಡಿ ಮತ್ತೆ ಅತ್ತಿಗೆ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ ಆಗ ತಪ್ಪಿಸಿಕೊಂಡು



ಹೋಗಿ ಜೀವ ಉಳಿಸಿಕೊಂಡಿದ್ದಾಳೆ. ವಿಷಯ ತಿಳಿದು ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್‌ಐ ಮೌನೇಶ ರಾಠೋಡ್ ಸಿಬ್ಬಂದಿಗಳ ಜೊತೆಗೆ ಅಲಬನೂರು ಗ್ರಾಮಕ್ಕೆ ತೆರಳಿ ಕೊಲೆ ಮಾಡಿದ ಆರೋಪಿ ಬಸವರಾಜನನ್ನು ಬಂಧಿಸಿ ಮೃತ ದೇಹವನ್ನು ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಿದ್ದಾರೆ.

ಹಲ್ಲೆಗೊಳಗಾದ ಅಮೃತಮ್ಮ ಗಂಡ ಸಿದ್ದಪ್ಪರನ್ನು ಚಿಕಿತ್ಸೆಗೆಂದು ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. ನನ್ನ ಮಗನನ್ನು ಕೊಲೆ ಮಾಡಿದ ಬಸವರಾಜ ಹಾಗೂ ವೀರೇಶ ಆತನ ತಾಯಿ ಚಿನ್ನಮ್ಮ ಇವರ ಮೇಲೆ ಕ್ರಮ ಕೈಗೊಳ್ಳುವಂತೆ ಮೃತಪಟ್ಟ ಬಾಲಕನ ತಂದೆ ಸಿದ್ದಪ್ಪ ಪೊಲೀಸ್ ಅಧಿಕಾರಿಗಳಿಗೆ ಒತ್ತಾಯ ಮಾಡಿದರು.

# ದೇವದುರ್ಗ: ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ



ನೈಜ್ಯ ದೆಸೆ ನ್ಯೂಸ್

ರಾಯಚೂರು: ಜಿಲ್ಲೆಯ ದೇವದುರ್ಗ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2026ನೇ ಸಾಲಿನಲ್ಲಿ ವಿವಿಧ ವೃತ್ತಿಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಎಸ್.ಎಸ್.ಎಲ್.ಸಿ ಉರ್ತ್ತೀಣರಾದ ವಿದ್ಯಾರ್ಥಿಗಳು ಇಲಾಖಾ ವೆಬ್‌ಸೈಟ್ ವಿಳಾಸ: www.cite.karnataka.gov.in ನಲ್ಲಿ ಖಾಸಗಿ ಕಂಪ್ಯೂಟರ್ ಸೆಂಟರ್‌ಗಳಲ್ಲಿ ಅಥವಾ ನೇರವಾಗಿ ಸಂಸ್ಥೆಯಲ್ಲಿ ಆನ್‌ಲೈನ್ ಮುಖಾಂತರ ಮೇ.08ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಮಹಿಳಾ ಅಭ್ಯರ್ಥಿಗಳಿಗೆ ಉಚಿತ ಪ್ರವೇಶವನ್ನು ನೀಡಲಾಗಿದೆ. ಅಭ್ಯರ್ಥಿಗಳು ಕಡ್ಡಾಯವಾಗಿ ಮೊಬೈಲ್ ಸಂಖ್ಯೆ & ಇಮೇಲ್ ವಿಳಾಸವನ್ನು ಹೊಂದಿರಬೇಕು. ಅಭ್ಯರ್ಥಿಗಳು 10ನೇ ತರಗತಿಯ ದೃಢೀಕೃತ ಆನ್‌ಲೈನ್ ಅಂಕಪಟ್ಟಿ, ಇತ್ತೀಚಿನ 03 ಫೋಟೋಗಳು, ಜಾತಿ & ಆದಾಯ ಪ್ರಮಾಣ ಪತ್ರದ ಪ್ರತಿಗಳು ಸಲ್ಲಿಸುವುದು ಕಡ್ಡಾಯವಾಗಿದೆ.

ಜೊತೆಗೆ 371 ಜೆ, ಕನ್ನಡ ಮತ್ತು ಗ್ರಾಮೀಣ ಮಾಧ್ಯಮ ಪ್ರಮಾಣ ಪತ್ರಗಳ ಪ್ರತಿಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9740671796, 9986850720, 9900971501 ಅಥವಾ 9113519543ಗೆ ಸಂಪರ್ಕ ಮಾಡಬಹುದಾಗಿದೆ ಎಂದು ದೇವದುರ್ಗ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಹ ಶಿಕ್ಷಕ ಹುದ್ದೆಯಿಂದ ಮುಖ್ಯೋಪಾಧ್ಯಾಯ ಹುದ್ದೆಗೆ ಬಡ್ತಿ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಬಿ.ಗಣೇಕಲ್ ಸಮಿಪದ ಸಮುದ್ರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕರಾದ ಶಿವಪ್ಪ ಮುಂಡರಗಿ ಇವರಿಗೆ ಇಂದು ಶಿಕ್ಷಣ ಇಲಾಖೆಯಿಂದ ಮುಖ್ಯೋಪಾಧ್ಯಾಯ ಹುದ್ದೆಗೆ ಬಡ್ತಿ ಪಡೆದಿದ್ದು ಮುಂದಿನ ದಿನಗಳಲ್ಲಿ ಸೇವೆ ಸಲ್ಲಿಸಲು ಸಹ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ ಸಮುದ್ರ ಗ್ರಾಮದ ಪ್ರಾಥಮಿಕ ಶಾಲೆಯನ್ನೆ ಆಯ್ಕೆ ಮಾಡಿಕೊಂಡಿದ್ದಾರೆ.**



2007 ರಲ್ಲಿ ಸೇವೆಗೆ ಸೇ-ರಿದ ಇವರು ತಮ್ಮ ಶಿಕ್ಷಕ ವೃತ್ತಿಯನ್ನು ಪ್ರಾಥಮಿಕ ಶಾಲೆ ಸಮುದ್ರದಲ್ಲಿ ಆರಂಭಿಸಿದ ಇವರು ಶಿಕ್ಷಕನಾಗಿ ಸತತವಾಗಿ ಇಲ್ಲಿಯವರೆಗೆ ಉತ್ತಮ ಕಾರ್ಯ ನಿರ್ವಹಿಸಿದ್ದಾರೆ ಅಲ್ಲದೆ ಸಮುದ್ರ ಗ್ರಾಮದಲ್ಲಿ ಎರಡು ಕೋಣೆಗಳಿದ್ದ ಶಾಲೆಯನ್ನು ಶಾಲೆ ಸಮಿತಿಯ ಪಧಾಧಿಕಾರಿಗಳು ಹಾಗೂ ಗ್ರಾಮದ ಶೀಕ್ಷಣ ಪ್ರೇಮಿಗಳ ಸಹಕಾರದಿಂದ ಎರಡು ಎಕರೆ ಬೇರೆ ಕಡೆ ಮಂಜೂರು ಮಾಡಿಸಿಕೊಂಡು ಶಾಲೆಯನ್ನು ಬೇರೆ ಸ್ಥಳಕ್ಕೆ ಸ್ಥಳಾಂತಿರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಬಹಳಷ್ಟು ಅನುಕೂಲ ಮಾಡಿಕೊಡುವಲ್ಲಿ ಇವರ ಶ್ರಮ ಬಹಳಷ್ಟು ಹಾಗೂ ಶಾಲೆಯ ಸುತ್ತ ತಡೆಗೋಡೆ ನಿರ್ಮಿಸಿಕೊಂಡು ಶಾಲೆಯ ಆವರಣದಲ್ಲಿ ಗಿಡ ಮರಗಳು ಪಾಲನೆ ಮಾಡಿ ಮತ್ತು ಕೈ ತೋಟ ನಿರ್ಮಿಸಿ ಬಿಸಿಯೂಟದಲ್ಲಿ ತಮ್ಮ ಶಾಲೆಯ ಮಕ್ಕಳಿಗೆ ತರಕಾರಿಯನ್ನು ಉಪಯೋಗಿಸುತ್ತಿದ್ದರು ಹೀಗೆ ಶಾಲೆಯಲ್ಲಿ ಕ್ರಿಡಾ ಚಟುವಟಿಕೆ ಸ್ವರ್ದಾತ್ಮಕ ಪರಿಕ್ಷೆ ಇನ್ನು ಹಲವಾರು ಚಟುವಟಿಕೆ ನಡೆಸುವ ಮೂಲಕ ವಿದ್ಯಾರ್ಥಿಗಳ ನೆಚ್ಚಿನ ಶಿಕ್ಷಕರಾಗಿದ್ದಾರೆ ಆದರೆ ಇನ್ನು ಹೆಚ್ಚಿನ ಸೇವೆ ಸಲ್ಲಿಸಲು ಮತ್ತೆ ತಾವು ಕಾರ್ಯ ನಿರ್ವಹಿಸಿದ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಲು ಸಮುದ್ರದ ಶಾಲೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇವರ ಸೇವೆಯನ್ನು ಪರಿಗಣಿಸಿ ಎರಡು ಬಾರಿ ತಾಲೂಕ ಉತ್ತಮ ಶಿಕ್ಷಕನಾಗಿ ಪ್ರಶಸ್ತಿ ಲಭಿಸಿದೆ ಹಾಗೂ ಇತ್ತಿಚೆಗೆ ಸರ್ಕಾರಿ ನೌಕರರ ಸಂಘದ ನಿರ್ದೇಶಕರಾಗಿ ಅವಿರೋದ ಆಯ್ಕೆಯಾಗಿ ಪ್ರಸ್ತುತ ಸಂಘಟನೆಯಲ್ಲಿ ತಾಲೂಕ ಕ್ರಿಡಾ ಕಾರ್ಯದರ್ಶಿಯಾಗಿದ್ದಾರೆ ಮುಂದಿನ ದಿನಮಾನಗಳಲ್ಲಿ ಇವರ ಸೇವೆ ಹೆಚ್ಚಿನ ರೀತಿಯಲ್ಲಿ ಶಾಲೆಗೆ ಮಕ್ಕಳಿಗೆ ಸಿಗಲೆಂದು ಸಮುದ್ರ ಗ್ರಾಮದ ಗ್ರಾಮಸ್ಥರು ಹರ್ಷ ವ್ಯಕ್ತ ಪಡಿಸಿದ್ದಾರೆ.

# ಕನ್ನಡ ಸೇನೆ ಕರ್ನಾಟಕದ ಮಾನ್ವಿ ನಗರ ಘಟಕಕ್ಕೆ ಹೊಸ ಪದಾಧಿಕಾರಿಗಳ ಆಯ್ಕೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಕನ್ನಡ ಸೇನೆ ಕರ್ನಾಟಕ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ನಗರ ಘಟಕಕ್ಕೆ ಹೊಸದಾಗಿ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಅಧ್ಯಕ್ಷ ಎಮ್. ಬಸವರಾಜ್ ಮರ್ಕಂದಿನ್ನಿ ಹೇಳಿದರು. ಸಂಘಟನೆಯ ವಿಸ್ತರಣೆ ಹಾಗೂ ಯುವಕರಿಗೆ ಜವಾಬ್ದಾರಿ ನೀಡುವ ನಿಟ್ಟಿನಲ್ಲಿ ಈ ನೇಮಕಾತಿ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದರು.**

ತಾಲೂಕು ಅಧ್ಯಕ್ಷ ಬಸವರಾಜ್



ಮೈಲಾರಿ ಅವರ ನೇತೃತ್ವದಲ್ಲಿ, ನಗರ ಘಟಕದ ಅಧ್ಯಕ್ಷ ಶೇಖ್ ಮುಸ್ತಫ ಹಾಗೂ ಪ್ರಧಾನ ಕಾರ್ಯದರ್ಶಿ ಶಿವಾನಂದ ನಾಯಕ ಅವರ ಮಾರ್ಗದರ್ಶನದಲ್ಲಿ ಹೊಸ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಸಂಘಟನೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ನೇಮಕಗೊಂಡ ಪದಾಧಿಕಾರಿಗಳು: ನಗರ ಉಪಾಧ್ಯಕ್ಷರಾಗಿ ಶರಣಬಸವ, ನಜೀರ್ ಬಾಲನಗರ, ಪ್ರಭು, ಶಾಹಿದ್, ಪ್ರಧಾನ ಕಾರ್ಯದರ್ಶಿಯಾಗಿ ಶಿವು, ಕಾರ್ಯದರ್ಶಿಯಾಗಿ ವಾಹಿದ್, ವಾರ್ಡ್ ಅಧ್ಯಕ್ಷರಾಗಿ ವಾಹಿದ್ ಪಾಷಾ,ಮಹಮ್ಮದ್ ಜಾಫರ್, ಶಬ್ಬೀರ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಮಹಮ್ಮದ್ ಗೌಸ್ ಉಪಸ್ಥಿತರಿದ್ದರು.

# ಇಂಡೋ-ನೇಪಾಳ ಅಂತಾರಾಷ್ಟ್ರೀಯ ಸರಣಿಯಲ್ಲಿ ಮುದ್ದೇಬಿಹಾಳದ ವಿದ್ಯಾರ್ಥಿಗೆ ಸಾಧನೆ ಮಲೇಷ್ಯಾ ಚಾಂಪಿಯನ್‌ಶಿಪ್‌ಗೆ ಜೀಶಾನ್ ರಿಸಾಲ್ದಾರ್ ಆಯ್ಕೆ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ನೇಪಾಳದಲ್ಲಿ ಇತ್ತೀಚೆಗೆ ಯುತ್ ಗೇಮ್ಸ್ ಕೌನ್ಸಿಲ್ ಇಂಡಿಯಾ ಸಹಯೋಗದಲ್ಲಿ ಯುತ್ ಗೇಮ್ಸ್ ಫೌಂಡೇಷನ್ ಆಯೋಜಿಸಿದ್ದ 8ನೇ ಸಾಲಿನ ಇಂಡೋ?ನೇಪಾಳ ಇಂಟ-ರ್ನ್ಯಾಷನಲ್ ಸೀರೀಸ್?2026 ಕ್ರೀಡಾಕೂಟದಲ್ಲಿ ಮುದ್ದೇಬಿಹಾಳನಗರದಬಸವಇಂಟರ್‌ನ್ಯಾಷನಲ್ ಶಾಲೆಯ ವಿದ್ಯಾರ್ಥಿ ಮೊಹ್ಮದ್ ಜೀಶಾನ್ ರಿಸಾಲ್ದಾರ್ ಉತ್ತಮ ಸಾಧನೆ ತೋರಿದ್ದಾರೆ.**

ಅವರು ಅಂಡರ್-10 ವಿಭಾಗದ 100 ಮೀಟರ್ ಓಟದಲ್ಲಿ 14.56 ಸೆಕೆಂಡುಗಳಲ್ಲಿ ಗುರಿ ತಲುಪಿ ಪ್ರಥಮ ಸ್ಥಾನ ಪಡೆದು ಗಮನ ಸೆಳೆದಿದ್ದಾರೆ. ಈ ಸಾಧನೆಯ ಫಲವಾಗಿ




ಮಲೇಷ್ಯಾದಲ್ಲಿ ನಡೆಯಲಿರುವ ಸೌತ್ ಏಷಿಯನ್ ಯುತ್ ಗೇಮ್ಸ್ ಇಂಟರ್ನ್ಯಾಷನಲ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ. ಜೀಶಾನ್ ಅವರು ಆರಂಭದಿಂದಲೇ ಅಥ್ಲೆಟಿಕ್ಸ್‌ನಲ್ಲಿ ಗಮನಾರ್ಹ ಸಾಧನೆ ಮಾಡುತ್ತಿದ್ದು, ಇತ್ತೀಚೆಗೆ ಗೋವಾದಲ್ಲಿ ನಡೆದ ಯುತ್ ಗೇಮ್ಸ್ ಕೌನ್ಸಿಲ್ ಇಂಡಿಯಾ ಕ್ರೀಡಾಕೂಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ 100 ಮೀಟರ್ ಓಟದಲ್ಲಿ ಚಿನ್ನದ ಪದಕ ಗೆದ್ದು ರಾಜ್ಯಕ್ಕೆ ಕೀರ್ತಿ ತಂದಿದ್ದರು.


ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಾದ ಸರೂರ ಗ್ರಾಮದ ಸಿದ್ರಾಮಪ್ಪ ಭಜಂತ್ರಿ ಅವರ ಮಾರ್ಗದರ್ಶನದಲ್ಲಿ ಜೀಶಾನ್ ಈ ಸಾಧನೆ ಮಾಡಿದ್ದು, "ನಾವು ಹಾಕಿದ ಪರಿಶ್ರಮಕ್ಕೆ ವಿದ್ಯಾರ್ಥಿ ಉತ್ತಮ ಪ್ರತಿಫಲ ನೀಡಿದ್ದಾರೆ" ಎಂದು ಅವರು ಸಂತೋಷ ವ್ಯಕ್ತಪಡಿಸಿದರು. ಜೀಶಾನ್ ಅವರ ಸಾಧನೆಗೆ ಶಾಲೆಯ ಪ್ರಾಂಶುಪಾಲರಾದ ಪ್ರಭಾ ಚಿನಿವಾರ, ಅಧ್ಯಕ್ಷರಾದ ಶಿವಕುಮಾರ್ ಹರ್ಲಾಪುರ್ ಹಾಗೂ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ. ವಿದ್ಯಾರ್ಥಿಗಳಿಗೆ ನೇಪಾಳದಲ್ಲಿ ಸಹಕಾರ ನೀಡಿದ ಶಿಕ್ಷಕಿ ಪ್ರಿಯಾಂಕಾ ಹೊಸಮನಿ ಅವ-ರಿಗೆ ಪೋಷಕರು ಧನ್ಯವಾದ ತಿಳಿಸಿದ್ದಾರೆ. ಒಟ್ಟಾರೆ, ಪ್ರಾರಂಭದಲ್ಲೇ ಅಥ್ಲೆಟಿಕ್ಸ್‌ನಲ್ಲಿ ಸಾಧನೆ ತೋರಿರುವ ಜೀಶಾನ್ ಮುಂದಿನ ದಿನಗಳಲ್ಲಿ ಖೇಲೋ ಇಂಡಿಯಾ, ಏಷ್ಯನ್ ಗೇಮ್ಸ್, ಕಾಮನ್ವೆಲ್ತ್ ಗೇಮ್ಸ್ ಹಾಗೂ ಒಲಿಂಪಿಕ್ಸ್‌ಗಳಲ್ಲಿ ಭಾರತವನ್ನು ಪ್ರತಿನಿಧಿಸಿ ದೇಶದ ಕೀರ್ತಿಯನ್ನು ಹೆಚ್ಚಿಸಲಿ ಎಂದು ಸಾರ್ವಜನಿಕರು ಹಾಗೂ ಸಂಘ-ಸಂಸ್ಥೆಗಳು ಹಾರೈಸಿವೆ.

# ಜಿಲ್ಲಾಡಳಿತದಿಂದ ಮೇ.01ರಂದು ಭಗವಾನ್ ಬುದ್ಧರ 2,570ನೇ ಜಯಂತಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಂ-ಯುಕ್ತಾಶ್ರಯದಲ್ಲಿ ಭಗವಾನ್ ಬುದ್ಧರ 2570ನೇ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಮೇ.01ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ. ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು.**

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು. ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ. ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ



ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ,

ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ,

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಸಿದ್ಧಾರ್ಥ ಬುದ್ಧ ವಿಹಾರ ಸಮಿತಿಯ ಅಧ್ಯಕ್ಷ ಆರ್.ರವಿಕುಮಾರ ರಾಂಪೂರು, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ.,

ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಬಾಗಿಯಾಗಲಿದ್ದಾರೆ. ರಾಯಚೂರು ತಾಲೂಕಿನ ಶಕ್ತಿನಗರದ ಕೆಪಿಸಿ-ಎಲ್, ಪಂ.ಜಾತಿ/ ಪಂ.ವರ್ಗದ ನೌಕರರ ಸಂಘದ ಅಧ್ಯಕ್ಷ ಗೌತಮ ಕಟ್ಟಿಮನಿ ಅವರು ಭಗವಾನ್ ಬುದ್ಧರ ಜಯಂತಿ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೇಮಕಾತಿ ಪ್ರಕಟಣೆ

ಭಾರತೀಯ ಕ್ರೀಡಾ ಪ್ರಾಧಿಕಾರ ನೇಮಕಾತಿ 2026–20 ಉಪ ನಿರ್ದೇಶಕ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಏಪ್ರಿಲ್ 29, 2026 ಭಾರತೀಯ ಕ್ರೀಡಾ ಪ್ರಾಧಿಕಾರ ನೇಮಕಾತಿ 2026: 20 ಉಪ ನಿರ್ದೇಶಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತೀಯ ಕ್ರೀಡಾ ಪ್ರಾಧಿಕಾರದ ಅಧಿಕೃತ ಅಧಿಸೂಚನೆ ಏಪ್ರಿಲ್ 2026 ರ ಮೂಲಕ ಉಪ ನಿರ್ದೇಶಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 21–ಮೇ–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 22–04–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 21–ಮೇ–2026 ಅಧಿಕೃತ ವೆಬ್‌ಸೈಟ್: sportsauthorityofindia.nic.in

## ಜಾಲಹಳ್ಳಿಯಲ್ಲಿ 1 ಕೋಟಿ ಸಿಸಿ ರಸ್ತೆ ಕಳಪೆ ಕಾಮಗಾರಿ ರೈತ ಸಂಘ ಆಕ್ರೋಶ

# ಧೂಳು, ನೀರು ನಿಲುಗಡೆ, ಕಿತ್ತುಹೋದ ರಸ್ತೆ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಅಭಿವೃದ್ಧಿಯ ಹೆಸರಿನಲ್ಲಿ ಕೋಟಿ ಕೋಟಿ ರೂಪಾಯಿ ವೆಚ್ಚ ಮಾಡಿ ಕೈಗೊಂಡ ಕಾಮಗಾರಿಗಳು ಜನರಿಗೆ ಪ್ರಯೋಜನವಾಗದೇ ಸಂಕಷ್ಟ ಉಂಟುಮಾಡುತ್ತಿರುವ ಘಟನೆಗಳು ದಿನೇ ದಿನೇ ಹೆಚ್ಚುತ್ತಿವೆ. ಇದಕ್ಕೆ ತಾಜಾ ಉದಾಹರಣೆಯಾಗಿ ಜಾಲಹಳ್ಳಿಯ ಅಂಬೇಡ್ಕರ್ ವೃತ್ತದಿಂದ ರಂಗನಾಥ ದೇವಸ್ಥಾನವರೆಗೆ ನಿರ್ಮಿಸಲಾದ ಸುಮಾರು 1 ಕೋಟಿ ವೆಚ್ಚದ ಸಿಸಿ ರಸ್ತೆ ಹಾಗೂ ಚರಂಡಿ ಕಾಮಗಾರಿ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.**





ಕಾಮಗಾರಿ ಆರಂಭದಿಂದಲೇ ಗುಣಮಟ್ಟದ ಕೊರತೆ ಸ್ಪಷ್ಟವಾಗಿದ್ದು, ಇದರ ಹಿಂದೆ ಅಧಿಕಾರಿಗಳ ನಿರ್ಲಕ್ಷ್ಯವೋ ಅಥ–'ವಾ ರಾಜಕೀಯ ಒತ್ತಡವೋ ಎಂಬ ಪ್ರಶ್ನೆ ಸಾರ್ವಜನಿಕರಲ್ಲಿ ಉದ್ಭವಿಸಿದೆ.

ರೈತ ಸಂಘದ ಆರೋಪ:
ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘಟನೆಯ ಅಧ್ಯಕ್ಷ ಹನುಮಂತ ಮಡಿವಾಳ ಅವರು, ಜನರ ತೆ–ರಿಗೆ ಹಣದಿಂದ ನಡೆಯುವ ಕಾಮಗಾ–ರಿಗಳಲ್ಲಿ ಗುಣಮಟ್ಟ ಕಡೆಗಣಿಸುವುದು ಖಂಡನೀಯ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕಾಮಗಾರಿ ಮೇಲ್ವಿಚಾರಣೆ ಮಾಡಬೇಕಿದ್ದ ಏಖಖಆಐ ಇಲಾಖೆಯ ಜೆಇ ಹಾಗೂ ಸಂಬಂಧಪಟ್ಟ ಅಧಿಕಾ–ರಿಗಳು ತಮ್ಮ ಕರ್ತವ್ಯದಲ್ಲಿ ವಿಫಲರಾಗಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

**ಸ್ಥಳೀಯರ ಸಂಕಷ್ಟ:**
* ಕಳಪೆ ಸಿಮೆಂಟ್ ಬಳಕೆಯಿಂದ ವಾಹನ ಸಂಚಾರದ ವೇಳೆ ಬಿಳಿ ಧೂಳು ಮೋಡದಂತೆ ಹರಡುವುದು
* ಅಂಗಡಿ ಮಾಲೀಕರು, ಪಾದಚಾ–ರಿಗಳು ಹಾಗೂ ನಿವಾಸಿಗಳು ಆರೋಗ್ಯ ಸಮಸ್ಯೆಗಳ ಭೀತಿಯಲ್ಲಿ ಬದುಕುವುದು
* ಕಾಮಗಾರಿ ಪೂರ್ಣಗೊಂಡ ಕೆಲವೇ ದಿನಗಳಲ್ಲಿ ರಸ್ತೆ ಕಿತ್ತುಹೋಗಿ, ಕಂಕರುಗಳು ಹೊರಬೀಳುವುದು

**ಚರಂಡಿ ಸಮಸ್ಯೆ:**
ರಸ್ತೆಯ ಮೇಲೆಯೇ ನೀರು ನಿಂತುಕೊಳ್ಳುತ್ತಿರುವುದು, ಸಮರ್ಪಕ ಚರಂಡಿ ವ್ಯವಸ್ಥೆಯ ಕೊರತೆಯನ್ನು ತೋರಿಸುತ್ತದೆ. ಕಾಮಗಾರಿ ಕ್ರಿಯಾ ಯೋಜನೆಯಂತೆ ನಡೆದಿಲ್ಲ ಎಂಬುದು ಮೇಲ್ನೋಟಕ್ಕೇ ಗೋಚರಿಸುತ್ತಿದ್ದು, ಸಾರ್ವಜನಿಕರ ಹಣದ ದುರ್ಬಳಕೆಯ ಅನುಮಾನಕ್ಕೆ ಕಾರಣವಾಗಿದೆ.

**ತಕ್ಷಣ ಕ್ರಮಕ್ಕೆ ಒತ್ತಾಯ:**
ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಸಂಪೂರ್ಣ ತನಿಖೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಜೊತೆಗೆ ಧೂಳುರಹಿತ, ದೀರ್ಘಕಾಲ ಬಾಳಿಕೆ ಬರುವ ಗುಣಮಟ್ಟದ ರಸ್ತೆ ಹಾಗೂ ಸಮರ್ಪಕ ಚರಂಡಿ ವ್ಯವಸ್ಥೆ ನಿರ್ಮಿಸಿಕೊಡಬೇಕು ಎಂದು ರೈತ ಸಂಘ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ದುರುಗಪ್ಪ ಹೊರಟ್ಟಿ, ಗ್ರಾ.ಪಂ ಸದಸ್ಯ ಮಕ್ತುಮ್ ಭಾಷಾ, ಶಿವಮಾನ್ಯಪ್ಪ ತ್ಯಾಪ್ಲಿ ಉಪಸ್ಥಿತರಿದ್ದರು. ವರದಿ ಖಾಜಾ ಹುಸೇನ್ ಬಾಬಾ ಜಾಲಹಳ್ಳಿ

## ಸಾಲಾಗಿ ಬಿದ್ದ ಕರೆಂಟು ಕಂಬಗಳು, ಜೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯ, ರೈತರು ಆಕ್ರೋಶ

ನೈಜ್ಯ ದೆಸೆ ನ್ಯೂಸ್

**ಮಸ್ಕಿ ಕವಿತಾಳ ಮುಖ್ಯ ರಸ್ತೆ ಕಲ್ಪಿಸುವ, ಜೋಳದರಾಶಿಕ್ಯಾಂಪ, ಪಲ್ಲಯಕ್ಯಾಂಪ ರಸ್ತೆಯ ಹೊಲಗದ್ದೆಗಳಲ್ಲಿ ಕಳೆದ 15 20 ದಿನಗಳ ಹಿಂದೆ ಭಾರಿ ಪ್ರಮಾಣದ ಗಾಳಿ ಮಳೆ ಗುಡುಗಿನಿಂದ ಅಂದಾಜು ಹದಿನೈದು ರಿಂದ ಇಪ್ಪತ್ತು ಕರೆಂಟ ಕಂಬಗಳು ವೈರ ಸಮೇತ ಕೆಳಗಡೆ ಬಿದ್ದು ಕಂಬಗಳು ಮು–ರಿದು ಹೋಗಿವೆ, ವೈರ್ ಸಹ ಹಾಗೆ ಕೆಳಗಡೆ ಬಿದ್ದಿವೆ,**



ಆದರೆ ಇಷ್ಟು ದಿನಗಳ ಆದರೂ ಮಸ್ಕಿಯ ಜೆಸ್ಕಾಂ ಅಧಿಕಾರಿಗಳು ಈ ಅಪಾಯಕಾರಿ ಬೆಳವಣಿಗೆಯನ್ನು ಸರಿಪಡಿಸಿ ಕೆಲಸ ಮಾಡುವುದು ಬಿಟ್ಟು ನಿರ್ಲಕ್ಷ್ಯ ತಾಳಿದ್ದಾರೆ, ಸದ್ಯ ಮಳೆ ಬರುವ ಕಾರಣ ಹೊಲಗಳು ಹಸಿಯಾಗಿದ್ದು, ರೈತರು ಕೃಷಿ ಚಟುವಟಿಕೆ ಆರಂಭ ಮಾಡುತ್ತಾರೆ ಅದಕ್ಕೆ ಕಂಬ ಬಿದ್ದಿರುವ ಹೊಲ ಗದ್ದೆಗಳ ರೈತರು ಬಹಳಷ್ಟು ಆಕ್ರೋಶ ಭರಿತರಾಗಿದ್ದು, ಈಗಾದರೂ ಸಂಬಂಧಿಸಿದ ಜೆಸ್ಕಾಂ ಅಧಿಕಾರಿಗಳು ಬಿದ್ದಿರುವ ಕಂಬಗಳನ್ನು ಬೇಗನೆ ಸರಿಪಡಿಸುವ ಕೆಲಸ ಮಾಡಬೇಕು ಎಂದು ರೈತರ ಆಗ್ರಹವಾಗಿದೆ.

# ಅರಕೇರದಲ್ಲಿ SSF ಸ್ಥಾಪನಾ ದಿನ ಆಚರಣೆ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ಅರಕೇರದಲ್ಲಿ SSF (ಸಮಸ್ತ ಸುನ್ನಿ ಸ್ಟೂಡೆಂಟ್ಸ್ ಫೆಡರೇಷನ್) ಸ್ಥಾಪನಾ ದಿನವನ್ನು ಭಕ್ತಿಪೂರ್ವಕವಾಗಿ ಹಾಗೂ ಉತ್ಸಾಹಭರಿತವಾಗಿ ಆಚರಿಸಲಾಯಿತು. ಬೆಳಿಗ್ಗೆ 8 ಗಂಟೆಗೆ ಸರಿಯಾಗಿ ಅರಕೇರದ ದಾರುಲ್ ಮುಸ್ತಫಾ ಎಜು ಅಕಾಡೆಮಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಿತು.**

ಧ್ವಜಾರೋಹಣ SSF ರಾಯಚೂರು ಜಿಲ್ಲೆಯ ಅಧ್ಯಕ್ಷರಾದ ಹಾಫೀಜ್ ಭಾಷಾ ಹಜ್ರತ್ ಅವರು ಧ್ವಜಾರೋಹಣ ನೆರವೇ–ರಿಸಿದರು. ಕಾರ್ಯಕ್ರಮದ ಪ್ರಮುಖ ಅಂಶಗಳು ಮದ್ರಸ ಅಧ್ಯಾಪಕರಾದ ಸವಾದ್ ಹಿಕಮಿ ಉಸ್ತಾದರು ಉದ್ಘಾಟನಾ ಭಾಷಣ ಮಾಡಿದರು. ದಾರುಲ್ ಮುಸ್ತಫಾ ಎಜು ಅಕಾಡೆಮಿಯ ಪ್ರಾಂಶುಪಾಲರಾದ ಸಾಜಿರ್ ಅನ್ವಾರಿ ಉಸ್ತಾದರು, ಖಖಈ ಸಂಸ್ಥೆಯ 53 ವರ್ಷಗಳ ಯಶಸ್ವಿ ಪಯಣವನ್ನು ವಿವರಿಸಿ, ಧಾರ್ಮಿಕ ಹಾಗೂ ಸಾಮಾಜಿಕ ಸೇವೆಗಳ ಮಹತ್ವವನ್ನು ತಿಳಿಸಿದರು.

ಉಪಸ್ಥಿತರಾದ ಗಣ್ಯರು ಈ ಸಂದರ್ಭದಲ್ಲಿ ಇಬ್ರಾಹೀಂ ಸಾಹೇಬ್, ಹಾಫಿಜ್ ಯಾಸೀನ್ ಹಜ್ರತ್, ಮುಸ್ತಫಾ ಸಾಹೇಬ್, ಮುಹಮ್ಮದ್ ಅಕ್ರಮ್, ಮುಹಮ್ಮದ್ ಇಮಾಮ್ ಹಾಗೂ ದಾರುಲ್ ಮುಸ್ತಫಾ ಎಜು ಅಕಾಡೆಮಿಯ ಮದ್ರಸ ವಿದ್ಯಾರ್ಥಿಗಳು ಹಾಗೂ ಅರಕೆರ ಗ್ರಾಮದ ಸಾರ್ವಜನಿಕರು ಉಪಸ್ಥಿತರಿದ್ದರು. ಸಾರಾಂಶ ಧಾರ್ಮಿಕ ಜಾಗೃತಿ, ಶಿಕ್ಷಣ ಹಾಗೂ ಸಮಾಜ ಸೇವೆಯಲ್ಲಿ ಖಖಈ ಸಂಸ್ಥೆ ಕಳೆದ 53 ವರ್ಷಗಳಿಂದ ನೀಡುತ್ತಿರುವ ಮಹತ್ವದ ಕೊಡುಗೆಗಳನ್ನು ಸ್ಮರಿಸಿಕೊಂಡು, ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

## ಏಪ್ರಿಲ್ 30ರಂದು ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರಧಾನ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಘಟಕ ರಾಯಚೂರು ೨ವರ ಸಂಯುಕ್ತಾಶ್ರಯದಲ್ಲಿ ಸರ್ಕಾದ ನಿರ್ದೇಶನದಂತೆ 2026ನೇ ಸಾಲಿನಲ್ಲಿ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿಯ ಪ್ರಧಾನ ಸಮಾರಂಭವನ್ನು ನಗರದ ಪಂಡಿತ್ ಸಿದ್ದರಾಮ್ ಜಂಬಲದಿನ್ನಿ ರಂಗಮಂದಿರದಲ್ಲಿ ಏಪ್ರಿಲ್ 30ರ ಸಂಜೆ 4ಗಂಟೆಗೆ ಹಮ್ಮಿಕೊಳ್ಳಲಾಗಿದ್ದು,**



ಜಿಲ್ಲಾ ಮಟ್ಟದ ಅಧಿಕಾರಿಗಳು ತಮ್ಮ ಅಧಿನ ಇಲಾಖೆಯ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾ–ರಿಗಳು,ಸಿಬ್ಬಂದಿಯೊಂದಿಗೆ ಖುದ್ದಾಗಿ ಹಾಜರಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾ–ರಿಗಳಾದ ನಿತೀಶ್ ಕೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉತ್ತರ ಕರ್ನಾಟಕದಲ್ಲಿ ಸ್ಪೆಷಲ್ ಒಲಂಪಿಕ್ ಬೆಳವಣಿಗೆಗೆ ಸಲಹೆ ನೀಡಿದ ಶಶಿಕಲಾ ಜೊಲ್ಲೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ವಿಶೇಷ ಚೇತನ ಮಕ್ಕಳಿಗೆ ಅವಕಾಶ ನೀಡಿದರೆ ಅವರೂ ಕೂಡ ಸಾಮಾನ್ಯ ಮಕ್ಕಳಷ್ಟೇ ತಮ್ಮ ಪ್ರತಿಭೆಯನ್ನು ತೋರಿಸುತ್ತಾರೆ, ಬಹಳಷ್ಟು ವಿಶೇಷ ಚೇತನ ಮಕ್ಕಳ ಪಾಲಕರಿಗೆ ಹಾಗೂ ಶಿಕ್ಷಕರಿಗೂ ಸ್ಪೆಷಲ್ ಒಲಂಪಿಕ್ ಕು–ರಿತು ಮಾಹಿತಿ ಇಲ್ಲಾ, ಇದನ್ನು ನಾವು ಈ ಕು–ರಿತು ತಿಳುವಳಿಕೆ ಮೂಡಿಸುವ ಕೆಲಸ ನಮ್ಮ ಕಡೆಯಿಂದ ಆಗಬೇಕು ಆಗ ಸಹಜವಾಗಿ ಎಲ್ಲ ವಿಶೇಷ ಚೇತನ ಮಕ್ಕಳಿಗೆ ಇದರ ಪ್ರಯೋಜನ ಪಡೆಯುವುದಕ್ಕೆ ಸಾಧ್ಯ ಎಂದು ಕರ್ನಾಟಕ ರಾಜ್ಯ ಒಲಂಪಿಕ್ ಅಧ್ಯಕ್ಷರು ಹಾಗೂ ಮಾಜಿ ಸಚಿವರಾದ ಶಶಿಕಲಾ ಜೊಲ್ಲೆ ಹೇಳಿದರು.**



ಉತ್ತರ ಕರ್ನಾಟಕದಲ್ಲಿ ಸ್ಪೆಷಲ್ ಒಲಂಪಿಕ್ ಕುರಿತು ಹೆಚ್ಚೆಚ್ಚು ಕಾರ್ಯಕ್ರಮಗಳನ್ನು ಆಯೋಜನೆ ಮಾಡಬೇಕು, ಅಲ್ಲಿಯೂ ಕೂಡಾ ಅತ್ಯುತ್ತಮ ಸಾಮರ್ಥ್ಯ ಇರುವ ಮಕ್ಕಳಿದ್ದಾರೆ, ನಾವು ಈ ವರ್ಷ ಉತ್ತರ ಕರ್ನಾಟಕಕ್ಕೆ ಹೆಚ್ಚು ಗಮನ ಕೊಡಬೇಕು, ಆ ನಿಟ್ಟಿನಲ್ಲಿ ಅವರಿಗೆ ಅತ್ಯವಶ್ಯಕ ಇರುವ ವಸ್ತುಗಳಾದ ಕಿಟ್, ದೈಹಿಕ ಸಾಮಥ–ರ್ಯಕ್ಕೆ ಬೇಕಾದ ವಸ್ತುಗಳ ಪೂರೈಕೆಯನ್ನು ಸ್ಪೆಷಲ್ ಒಲಂಪಿಕ್ ಕಡೆಯಿಂದ ಒದಗಿಸೋಣ ಎಂದು ಹೇಳಿ, ನಮ್ಮ ರಾಜ್ಯದ ಮಕ್ಕಳು, ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡುವಂತ ವಾತಾವರಣವನ್ನು ನಿರ್ಮಾಣ ಮಾಡೋಣ, ಇಂತಹ ಮಕ್ಕಳ ಪಾಲಕರೂ ನಮ್ಮ ಮಕ್ಕಳು ನಮಗೆ ಹೆಮ್ಮೆ ಎಂದು ಹೇಳಿಕೊಳ್ಳುವಂತಹ ವ್ಯವಸ್ಥೆ ನಿರ್ಮಾಣ ಮಾಡೋಣ, ಇದಕ್ಕೆ ತಾವು ತಮ್ಮ ಅನುಭವ, ಶಕ್ತಿ ಹಾಗೂ ಪ್ರಯತ್ನ ಧಾರೆಯರೆಯಬೇಕೆಂದು ಸ್ಪೆಷಲ್ ಒಲೆಂಪಿಕ್ಸ್ ನಿರ್ದೇಶಕರಿಗೆ ಸಲಹೆ ನೀಡಿದರು.

ಸ್ಪೆಷಲ್ ಒಲಿಂಪಿಕ್ಸ್ ಉಪಾಧ್ಯಕ್ಷರಾದ ರೂಪ್ ಸಿಂಗ್ ಮಾತನಾಡಿ ಹೋದ ವರ್ಷ ನಡೆದ ಎಲ್ಲ ಕಾರ್ಯಕ್ರಮಗಳ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದು,ಈ ವರ್ಷ ನಮ್ಮ ವಿಶೇಷ ಚೇತನ ಮಕ್ಕಳು ಎಲ್ಲ ರಾಜ್ಯಕ್ಕಿಂತ ಹೆಚ್ಚು ಬಂಗಾರದ ಹಾಗೂ ಬೆಳ್ಳಿಯ ಪದಕಗಳನ್ನು ಪಡೆದು ರಾಷ್ಟ್ರ ಮಟ್ಟದಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ, ಪ್ರತಿ ಜಿಲ್ಲೆಯಲ್ಲಿಯೂ ಕಾರ್ಯಕ್ರಮ ಹಮ್ಮಿಕೊಂಡು ಹೆಚ್ಚೆಚ್ಚು ಮಕ್ಕಳು ಭಾಗವಹಿಸಲು ಅನುಕೂಲ ಮಾಡಿಕೊಡೋಣ ಎಂದು ಹೇಳಿದರು.

ಕರ್ನಾಟಕ ರಾಜ್ಯದ ಏರಿಯಾ ಡೈರೆಕ್ಟರ್ ಅಮರೇಂದ್ರ ಮಾತನಾಡಿ ಪ್ರತಿ ವರ್ಷಕ್ಕಿಂತ ಹೆಚ್ಚು ಈ ವರ್ಷ ತರಬೇತಿ ಕಾರ್ಯಕ್ರಮ ಹಾಗೂ ಕೋಚಿಂಗ್ ತರಬೇತಿ ಮಾಡಿದ್ದರಿಂದ ಬಹಳಷ್ಟು ಮಕ್ಕಳು ಸ್ಪೆಷಲ್ ಒಲಂಪಿಕ್ ಕ್ರೀಡಾಕೂಟದಲ್ಲಿ ಭಾಗವಹಿಸಿ ಹೆಚ್ಚು ಪದಕ ಗೆದ್ದು ರಾಜ್ಯಕ್ಕೆ ಹೆಸರು ತರಲು ಸಾಧ್ಯವಾಗಿದ್ದು ಅದಕ್ಕೆ ಅಧ್ಯಕ್ಷರ,ಉಪಾಧ್ಯಕ್ಷರ ಮಾರ್ಗದರ್ಶನ ಸಹಾಯವಾಗಿದೆ ಮುಂದೆ ಇಡೀ ರಾಜ್ಯದಲ್ಲಿ ಸ್ಪೆಷಲ್ ಒಲಂಪಿಕ್ ಕಾರ್ಯಗಳು ಮಾದ–ರಿಯಾಗುವಂತೆ ಮಾಡೋಣ ಎಂದರು. ಈ ಸಭೆಯಲ್ಲಿ ಕಾನೂನು ಸಲಹೆಗಾರರು, ಎಲ್ಲ ಕಮೀಟಿ ಸದಸ್ಯರು, ಪ್ರೋಗ್ರಾಂ ಮ್ಯಾನೇಜರ್ ಭಾಗವಹಿಸಿದ್ದರು.

## ನೀಟ್ ಪರೀಕ್ಷಾ ಪೂರ್ವಭಾವಿ ಸಭೆ ಪಾರದರ್ಶಕ ಪರೀಕ್ಷೆ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಿ:ಎಡಿಸಿ ಶಿವಾನಂದ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಮೇ.3ರಂದು ರಾಯಚೂರು ನಗರದ 11 ಪರೀಕ್ಷಾ ಕೇಂದ್ರಗಳಲ್ಲಿ ನೀಟ್–ಯುಜಿ ಪರೀಕ್ಷೆ–2026 ಜರುಗಲಿದ್ದು, ಪಾರದರ್ಶಕವಾಗಿ ಹಾಗೂ ವ್ಯವಸ್ಥಿತವಾಗಿ ಪರೀಕ್ಷೆ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.**




ಏಪ್ರಿಲ್ 29ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇ–ರಿಯ ವಿಡಿಯೋ ಕಾನ್ಫರೇನ್ಸ್ ಸಭಾಂಗಣದಲ್ಲಿ ಜರುಗಿದ ನೀಟ್ ಪರೀಕ್ಷಾ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಿದ ಎಲ್ಲರೂ ಪರೀಕ್ಷಾ ಮಾರ್ಗಸೂಚಿಗಳನ್ನು ಪಾಲಿಸಬೇಕು. ನೀಟ್ ಪರೀಕ್ಷೆ ಬಹಳ ಸೂಕ್ಷ್ಮ?ಮವಾಗಿದೆ. ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾದ ಅಧಿಕಾ–ರಿಗಳು, ಮಾರ್ಗಾಧಿಕಾರಿಗಳು, ವೀಕ್ಷಕರು, ಕೊಠಡಿ ಮೇಲ್ವಿಚಾರಕರು ತಮ್ಮ ಕರ್ತವ್ಯಗಳಲ್ಲಿ ಯಾವುದೇ ಲೋಪವಾಗದಂತೆ ಜವಾಬ್ದಾರಿಯಿಂದ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಬೇಕು ಎಂದರು.

ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡಬಾರದು. ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿತಗೊಂಡ ಅಧಿಕಾರಿಗಳು, ಉಪನ್ಯಾಸಕರು ಪರೀಕ್ಷಾ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕೊಠಡಿಯ ಒಳಗೆ ಶಿಸ್ತುಬದ್ಧವಾಗಿ ಪರೀಕ್ಷಾ ಪ್ರಾಧಿಕಾರದ ನಿಯಮಗಳ ಉಲ್ಲಂಘನೆಯಾಗದಂತೆ ಎಚ್ಚರಿಕೆಯಿಂದ ಕೆಲಸ ಮಾಡಬೇಕು ಎಂದರು.

ಎಲೆಕ್ಟ್ರಾನಿಕ ಉಪಕರಣಗಳ ನಿಷೇಧ: ಪರೀಕ್ಷಾರ್ಥಿಗಳು ಹಾಗೂ ಕೊಠಡಿಯ ಮೇಲ್ವಿಚಾರಕರಾಗಲಿ ಪರೀಕ್ಷಾ ಕೇಂದ್ರದೊಳಗೆ ಅತ್ಯಾಧುನಿಕ ಎಲೆಕ್ಟ್ರಾನಿಕ್ ಉಪಕರಣಗಳಾದ ಮೊಬೈಲ್, ಬ್ಲೂಟೂತ್, ಇಯರ್ ಫೋನ್‌ಗಳು, ಮೈಕ್ರೋಫೋನ್, ಕ್ಯಾಲಕ್ಯುಲೇಟರ್ ಹಾಗೂ ಗಡಿಯಾರಗಳನ್ನು ನಿಷೇಧಿಸಲಾಗಿದ್ದು, ಈ ಕುರಿತಂತೆ ಅಧಿಕಾರಿಗಳು ಎಚ್ಚರವಹಿಸಬೇಕು ಎಂದು ಅಪರ ಜಿಲ್ಲಾಧಿಕಾ–ರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಸಿಸಿ ಟಿವಿ–ಜಾಮರ್: ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಅಳವಡಿಕೆ, ಜಾಮರ್ ಹಾಗೂ ಕೊಠಡಿಯೊಳಗೆ ಗಡಿಯಾರ ಅಳವಡಿಕೆ ಕಡ್ಡಾಯವಾಗಿದೆ. ಪರೀಕ್ಷಾರ್ಥಿಗಳಿಗೆ ಶುದ್ಧ ಕುಡಿಯುವ ನೀರು, ಗಾಳಿ, ಬೆಳಕು, ಸೂಕ್ತ ಪೀಠೋಪಕರಣ ಒಳಗೊಂಡಂತೆ ಮೂಲಭೂತ ಸೌಕರ್ಯ ಒದಗಿಸಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾರ್ಥಿಗಳ ತಪಾಸಣಾ ಕಾರ್ಯಕ್ಕೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಬೇಕು. ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಬೇಕು ಎಂದು ರಾಯಚೂರಿನ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾರಾದ ದೀಪಾಶ್ರೀ ಅವರು ಸಭೆಗೆ ಮಾಹಿತಿ ನೀಡಿದರು.

11 ಪರೀಕ್ಷಾ ಕೇಂದ್ರಗಳು: ನೀಟ್ ಪರೀಕ್ಷೆಗೆ ಜಿಲ್ಲೆಯಲ್ಲಿ 3,744 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಲಾಗಿದ್ದು, ರಾಯಚೂರು ನಗರದ 11 ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದೆ.

ಮೇ.03ರ ಮಧ್ಯಾಹ್ನ 2 ರಿಂದ ಸಂಜೆ 5ಗಂಟೆಯವರೆಗೆ ಪರೀಕ್ಷೆ ನಡೆಯಲಿದ್ದು, ಪರೀಕ್ಷೆ ಕೇಂದ್ರಕ್ಕೆ ವಿದ್ಯಾರ್ಥಿಗಳು ಅಂದು ಬೆಳಿಗ್ಗೆ 11 ರಿಂದ 1.30ರೊಳಗಾಗಿ ಹಾಜರಾಗಬೇಕೆಂದು ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾರು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ರಾಯಚೂರು ವಿಭಾಗದ ನಿಯಂತ್ರಣಾಧಿಕಾರಿ ಚಂದ್ರಶೇಖರ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವೀರೇಶ ನಾಯಕ, ಕೇಂದ್ರೀಯ ವಿದ್ಯಾಲಯದ ಶಿಕ್ಷಕ ಪವನ ಪಾಂಡೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೋಮಶೇಖರಪ್ಪ ಹೊಕ್ರಾಣಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೆ.ಡಿ.ಬಡಿಗೇರ, ಯರಮರಸ್ ಅದರ್ಶ ವಿದ್ಯಾಲಯದ ಪ್ರಾಂಶುಪಾಲ ಮಹಮದ್ ಅಬ್ದುಲ್ ಯಾನಿಸಿ, ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಶ್ರೀದೇವಿ, ರಾಯಚೂರಿನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ವೆಂಕಣ್ಣ, ಉಪನ್ಯಾಸಕ ರವಿ ಮೇಸ್ತ್ರಿ ಸೇರಿದಂತೆ ವಿವಿಯ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಸಭೆಯಲ್ಲಿ ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬ್ಯಾಚುಲರ್ ಆಫ್ ಟೆಕ್ನಾಲಜಿ (ಬಿ.ಟೆಕ್) ಇನ್ ಮೈನಿಂಗ್ ಎಂಜಿನಿಯರಿಂಗ್

ಬ್ಯಾಚುಲರ್ ಆಫ್ ಟೆಕ್ನಾಲಜಿ (ಬಿ.ಟೆಕ್) ಇನ್ ಮೈನಿಂಗ್ ಎಂಜಿನಿಯರಿಂಗ್ ಕಾರ್ಯಕ್ರಮವು ವೃತ್ತಿಪರವಾಗಿ ವಿನ್ಯಾಸಗೊಳಿಸಲಾದ ಪದವಿಪೂರ್ವ ಕೋರ್ಸ್ ಆಗಿದ್ದು, ಇದು ಖನಿಜ ಸಂಪನ್ಮೂಲಗಳ ಪರಿಶೋಧನೆ, ಹೊರತೆಗೆಯುವಿಕೆ, ಸಂಸ್ಕರಣೆ ಮತ್ತು ನಿರ್ವಹಣೆಯ ಮೇಲೆ ಕೇಂದ್ರೀಕರಿಸುತ್ತದೆ. ಪಠ್ಯಕ್ರಮವು ಗಣಿಗಾರಿಕೆ ತಂತ್ರಜ್ಞಾನ, ಭೂವಿಜ್ಞಾನ, ಶಿಲಾ ಯಂತ್ರಶಾಸ್ತ್ರ, ಗಣಿ ಸುರಕ್ಷತೆ ಮತ್ತು ಪರಿಸರ ಸುಸ್ಥಿರತೆಯಲ್ಲಿ ಪ್ರಾಯೋಗಿಕ ತರಬೇತಿಯೊಂದಿಗೆ ಕೋರ್ ಎಂಜಿನಿಯರಿಂಗ್ ತತ್ವಗಳನ್ನು ಸಂಯೋಜಿಸುತ್ತದೆ. ವಿದ್ಯಾರ್ಥಿಗಳು ಭೂಗತ ಮತ್ತು ತೆರೆದ ಪಿಟ್ ಗಣಿಗಾರಿಕೆ ಕಾರ್ಯಾಚರಣೆಗಳಲ್ಲಿ ಪರಿಣಾಮಕಾರಿಯಾಗಿ ಮತ್ತು ಜವಾಬ್ದಾರಿಯುತವಾಗಿ ಕೆಲಸ ಮಾಡಲು ಅಗತ್ಯವಿರುವ ಜ್ಞಾನ ಮತ್ತು ಪ್ರಾಯೋಗಿಕ ಕೌಶಲ್ಯಗಳನ್ನು ಹೊಂದಿದ್ದಾರೆ. ಈ ಕಾರ್ಯಕ್ರಮವು ಸುಸ್ಥಿರ ಅಭ್ಯಾಸಗಳು, ಗಣಿಗಾರಿಕೆಯಲ್ಲಿ ಡಿಜಿಟಲ್ ಪರಿಕರಗಳು (GIS ಮತ್ತು ಗಣಿ ಯೋಜನಾ ಸಾಫ್ಟ್‌ವೇರ್‌ನಂತಹವು) ಮತ್ತು ಗಣಿ ಸುರಕ್ಷತಾ ನಿರ್ವಹಣೆಗೆ ಒತ್ತು ನೀಡುತ್ತದೆ. ಗಣಿಗಾರಿಕೆ ಕ್ಷೇತ್ರದ ಅಗತ್ಯಗಳಿಗೆ ಅನುಗುಣವಾಗಿ ಕೈಗಾ-ರಿಕೆಗಳಿಗೆ ಸಂಬಂಧಿಸಿದ ಪಠ್ಯಕ್ರಮ. ಇತ್ತೀಚಿನ ಗಣಿಗಾರಿಕೆ ಸಾಫ್ಟ್‌ವೇರ್ ಮತ್ತು ಸರ್ವೇಯಿಂಗ್ ಪರಿಕರಗಳಲ್ಲಿ ತರಬೇತಿ ಗಣಿ ಸುರಕ್ಷತೆ, ಪರಿಸರ ನಿರ್ವಹಣೆ ಮತ್ತು ಯಾಂತ್ರೀಕರಣದ ಮೇಲೆ ಗಮನಹರಿಸಿ. ಕೈಗಾರಿಕೆ ಮತ್ತು ಸಂಶೋಧನಾ ಅನುಭವ ಹೊಂದಿರುವ ತಜ್ಞ ಅಧ್ಯಾಪಕರು. ಮಾನ್ಯತೆ ಪಡೆದ ಮಂಡಳಿಯಿಂದ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ (PCM) ದೊಂದಿಗೆ 10+2 ಪದವಿ. ಕನಿಷ್ಠ 45–50% ಒಟ್ಟು ಅಂಕಗಳು (ವಿಶ್ವವಿದ್ಯಾನಿಲಯದ ಮಾನದಂಡಗಳ ಪ್ರಕಾರ) ಪ್ರವೇಶವು ಪ್ರವೇಶ ಪರೀಕ್ಷೆಯ ಅಂಕಗಳು ಅಥ-'ವಾ ಅರ್ಹತೆ ಆಧಾರಿತ ಆಯ್ಕೆಯ ಆಧಾರದ ಮೇಲೆ ಇರುತ್ತದೆ. ಎಂಜಿನಿಯರಿಂಗ್‌ನಲ್ಲಿ ಮೂರು ವರ್ಷಗಳ ಡಿಪ್ಲೊಮಾ ಕೋರ್ಸ್ ಹೊಂದಿರುವವರು ಲ್ಯಾಟರಲ್-ಎಂಟ್ರಿ ಯೋಜನೆಯಡಿಯಲ್ಲಿ ಬಿ.ಟೆಕ್‌ಗೆ ದಾಖಲಾಗಬಹುದು.

## ಬೆರಗುಗೊಳಿಸುವ ಬಳಗಾನೂರು ಬಂಧುಶತಪುರೇಶನ ಜಾತ್ರೆ: ನೆನಪುಗಳ ರಥ, ಭಕ್ತಿಯ ಪಥ!

ನೈಜ್ಯ ದೆಸೆ ನ್ಯೂಸ್

**ಬಳಗಾನೂರು ಎಂಬ ಹೆಸರು ಕೇಳಿದ ಕ್ಷಣ ಮನಸ್ಸಿನೊಳಗೆ ಒಂದು ಜಾತ್ರೆ ತೆರೆದುಕೊಳ್ಳುತ್ತದೆ. ಅದು ಕೇವಲ ಉತ್ಸವವಲ್ಲ; ಅದು ಊರಿನ ಹೃದಯದ ಬಡಿತ. ಪ್ರತೀ ಮೇ ತಿಂಗಳ ಆಗಿಹುಣ್ಣಿಮೆಯ ಬೆಳಕಿನಲ್ಲಿ ಅರಳುವ ಬಂಧುಶತಪುರೇಶನ ಜಾತ್ರೆ, ಭಕ್ತಿ, ಪೌರಾಣಿಕತೆ ಮತ್ತು ಬಾಲ್ಯದ ನೆನಪುಗಳ ಸಿಂಚನದಂತೆ ಮೇಳೈಸುತ್ತದೆ.**



ಮೂಲಗಳ ಕಥೆ ಹರಿದು ಬಂದ ದೈವ ಈ ಜಾತ್ರೆಯ ಆತ್ಮವೇ ಮಾರುತೇಶ್ವರ. ಹಿರಿಯರ ಮಾತಿನಲ್ಲಿ, ಈ ಆಂಜನೇಯ ಸ್ವಾಮಿ ಬಳಗಾನೂರಿನ ಮೂಲದವನು ಅಲ್ಲ. ಕಳಕಮಲ್ಲಯ್ಯ ಅಥವಾ ಹೂನೂರಿನ ಹಳ್ಳಗಳಿಂದ ಹರಿದು ಬಂದ ದೈವ ಎಂದು ಕಥ-'ಗಳು ಹೇಳುತ್ತವೆ. ಹಳ್ಳದ ಹೊಳೆ ಹೊತ್ತೊಯ್ದ ಮೂರ್ತಿಯನ್ನು ಕೌದಿಯಲ್ಲಿ ತಂದು ಪ್ರತಿಷ್ಠಾಪನೆ ಮಾಡಿದ ಕ್ಷಣದಿಂದಲೇ, ಈ ಊರಿನ ಭಕ್ತಿಯ ತಂತಿ ಇನ್ನಷ್ಟು ಗಾಢವಾಯಿತು.ಆದರೆ ಕಥೆ ಇಲ್ಲಿ ಮುಗಿಯುವುದಿಲ್ಲ.ಕೈಲಾಸ ಹನುಮಪ್ಪನ ಶರತ್ತು ಊರಿನ ಹೊರಗೆ ಬಯಲಿನಲ್ಲಿ ನಿಂತಿ-ರುವ ಕೈಲಾಸ ಹನುಮಪ್ಪ ಇನ್ನೊಂದು ಮೌನ ಕಥೆ.ನನಗೆ ಗುಡಿ ಕಟ್ಟಬೇಕಾದರೆ, ಒಂದೇ ದಿನದಲ್ಲಿ ಏಳು ಹೊಳೆಯ ನೀರು ತರಬೇಕು! ಈ ದೈವದ ಶರತ್ತು ಇನ್ನೂ ಈಡೇರಿಲ್ಲ.ಅದಕ್ಕಾಗಿ ಆತನಿಗೆ ಇನ್ನೂ ಗುಡಿ ಇಲ್ಲ.ಗಾಳಿ,ಮಳೆ, ಬಿಸಿಲುಗಳ ಜೊತೆ ಅವನು ಬದುಕುತ್ತಿರುವಂತೆಯೇ, ಊರಿನ ಜನರ ನಿರೀಕ್ಷೆಯೂ ಕಾಯುತ್ತಿದೆ.ಒಂದು ದಿನ, ಆ ಶರತ್ತು ನೆರವೇರುತ್ತದೆಯೇ? ಆ ದಿನ ಬಂದರೆ, ಮತ್ತೊಂದು ಮಹಾಜಾತ್ರೆ ಹುಟ್ಟಬಹುದು! ಜಾತ್ರೆಯ ಜಂಗಮ ಲೋಕ ಈ ಜಾತ್ರೆ ಕೇವಲ ತೇರು ಎಳೆಯುವ ಸಂಭ್ರಮವಲ್ಲ. ಇದು ಬದುಕಿನ ಮೇಳ.ಸುತ್ತಲಿನ ನಲವತ್ತಕ್ಕೂ ಹೆಚ್ಚು ಹಳ್ಳಿಗಳು, ಜೊತೆಗೆ ಆಂಧ್ರ, ತೆಲಂಗಾಣ, ಮಹಾರಾಷ್ಟ್ರದಿಂದಲೂ ಭಕ್ತರು ಹರಿದು ಬರುತ್ತಾರೆ. ಮುಜುರಾಯಿ ಇಲಾಖೆಯ ಅಧೀನದಲ್ಲಿ, ತಹಸೀಲ್ದಾರರ ನೇತೃತ್ವದಲ್ಲಿ ನಡೆಯುವ ರಥೋತ್ಸವ, ಒಂದು ಮಹಾ ನಾಟಕದ ಶೃಂಗಾರ ಶಿಖರ.ಆದರೆ ಜಾತ್ರೆಯ ನಿಜವಾದ ರಂಗಭೂಮಿ.ಜನರ ನಡುವೆ.

ಬೆಂಡು, ಬತಾಸು, ಬಳೆ, ಪಳಾರ. ಜೋಕಾಲಿ, ಜಂಪಿಂಗ್, ಪೀಪಿ ಧ್ವನಿಗಳ ಸಂಭ್ರಮ.ಕಡ್ಡಿಯಿಂದ ಎಳೆದು ತುಂಬುವ ಗುಲಾಬಿ ಬಣ್ಣದ ಜ್ಯೂಸ್.ಕಣ್ಣು ಮಿಟುಕಿಸಿ ನೋಡಬೇಕಾದ ಬೊಂಬಾಯಿ ನಾಟಕ? ಕೈಗೆ ಗಡಿಯಾರವಂತೆ ಕಟ್ಟುವ ಬೊಂಬಾಯಿ ಮಿಠಾಯಿ.ಇವುಗಳೆಲ್ಲಾ ಸೇರಿ, ಜಾತ್ರೆಯನ್ನು ಒಂದು "ಜೀವಂತ ಕನಸು" ಆಗಿ ರೂಪಿಸುತ್ತವೆ. ಜಾತ್ರೆಯ ಒಂದು ಸುತ್ತು ಹೊಡೆಯುವುದು ಎಂದರೆ, ಬಾಲ್ಯವನ್ನು ಮತ್ತೆ ಒಮ್ಮೆ ಕೈ ಹಿಡಿದು ನಡೆಸುವುದು.ನಾಳೆ ಅಪ್ಪನಿಂದ ಹಣ ತಂದು ಇದನ್ನೇ ತಗೋಣ"ಅನ್ನೋ ಚಿಕ್ಕ ಕನಸುಗಳು ಹೆಗಲ ಮೇಲೆ ಕೈ ಹಾಕಿಕೊಂಡು ಮಂದ್ಯಾಗ ಸಂದ್ಯಾಗ ನಡೆಯುವ ಗೆಳೆಯರ ಗ್ಯಾಂಗ್ ಮಂಚದ ಮೇಲೆ ಇಟ್ಟ ಗಡಿಯಾರ, ಕ್ಯಾಮೆರಾ ನೋಡಿ ಕಣ್ಣು ಹಾಯಿಸುವ ಹಂಬಲ,ಇವುಗಳೆಲ್ಲಾ ಹೃದಯದೊಳಗೆ ಮೃದುವಾಗಿ ಹೊಳೆಯುವ ನೆನಪುಗಳ ದೀಪಗಳು.

ಈ ಜಾತ್ರೆ ಒಂದು ಸಾಮಾಜಿ-ಕ ಚಿತ್ರಪಟ:ಉದ್ದಾರ ಆದವರು ಬಾಳೆಹಣ್ಣು ಎಸೆಯುವರು,ಇನ್ನೂ,ಹೋರಾಟದಲ್ಲಿರುವವರು ಅದನ್ನೇ ಮಾರುವರು. ಮದುವೆಯಾದವರು ಕಳಸ ನೋಡುತ್ತಾರೆ ಮದುವೆಯಾಗದವರು ಗುಂಪಿನೊಳಗಿನ ಕಣ್ಣುಗಳನ್ನೇ ಹಿಂಬಾಲಿಸುತ್ತಾರೆ ಇಲ್ಲಿ ಯಾರೂ ಪರರು ಅಲ್ಲ? ಎಲ್ಲರೂ ಒಂದೇ ಕಥೆಯ ಪಾತ್ರಗಳು. ಮತ್ತೆ ಬಂದಿದೆ ಆ ಕ್ಷಣ! ಮೇ 1 ? ಆಗಿಹುಣ್ಣಿಮೆ ಬಳಗಾನೂರು ಮತ್ತೊಮ್ಮೆ ನೆನಪುಗಳ ರಥವನ್ನು ಎಳೆಯಲು ಸಿದ್ಧವಾಗಿದೆ. ಬನ್ನಿ,ಭಕ್ತಿಯೊಂದಿಗೆ, ಹಾಸ್ಯದೊಂದಿಗೆ, ನೆನಪುಗಳೊಂದಿಗೆ.ಈ ಜಾತ್ರೆಯಲ್ಲಿ ಪಾಲ್ಗೊಳ್ಳಿ. ಜಾತ್ರೆಯನ್ನು ಯಶಸ್ವಿಗೊಳಿಸಿ. ಮತ್ತು ನಿಮ್ಮ ಹೃದಯದಲ್ಲಿ ಮತ್ತೊಂದು ಕಥೆ ಬರೆಯಿರಿ. ಸ್ಟೋರಿ: ಸುರೇಶ್ ಬಳಗಾನೂರು

## ಕರ್ತವ್ಯದಲ್ಲಿದ್ದ ಪೊಲೀಸರ ಮೇಲೆ ಹಲ್ಲೆ: ಕಾರು ಸವಾರರ ದಾಳಿ, ಕೊಲೆ ಯತ್ನ ಆರೋಪ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ಪಟ್ಟಣದ ಬಸವೇಶ್ವರ ಸರ್ಕಲ್ ಮತ್ತು ಬಸ್‌ಸ್ಟ್ಯಾಂಡ್ ಪ್ರದೇಶದಲ್ಲಿ ಭಾನುವಾರ ಸಂಜೆ ಸಂಚಾರ ನಿಯಂತ್ರಣದ ವೇಳೆ ಪೊಲೀಸರ ಮೇಲೆ ದಾಳಿ ನಡೆದಿರುವ ಘಟನೆ ವರದಿಯಾಗಿದೆ. ಸಂಜೆ ಸುಮಾರು 6 ಗಂಟೆ ಸುಮಾರಿಗೆ ಬಸವೇಶ್ವರ ಸರ್ಕಲ್‌ನಲ್ಲಿ ವಾಹನ ದಟ್ಟಣೆ ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಕರ್ತವ್ಯದಲ್ಲಿದ್ದ ಪೊಲೀಸರು ಸಂಚಾರ ಸುಗಮಗೊಳಿಸಲು ವಾಹನಗಳನ್ನು ಮುಂದೆ ಸಾಗುವಂತೆ ಸೂಚಿಸುತ್ತಿದ್ದರು.**

ಈ ವೇಳೆ ಕಾರಿನಲ್ಲಿ ಬಂದ ಕೆಲವರು ಪೊಲೀಸರ ಸೂಚನೆಯನ್ನು ಲೆಕ್ಕಿಸದೆ ವಾಗ್ವಾದಕ್ಕೆ ಮುಂದಾಗಿ, ವಾಹನ ತೆರವುಗೊಳಿಸಲು ನಿರಾಕರಿಸಿದರು. ಮೇಲಾಧಿಕಾರಿಗಳ ಸಂಪರ್ಕ ಸಂಖ್ಯೆಯನ್ನು ಕೇಳುತ್ತಾ ಗಲಾಟೆ ಆರಂಭಿಸಿದ ಆರೋಪಿತರು, ಪೊಲೀಸರು ಮನವೊಲಿಸಲು ಯತ್ನಿಸಿದರೂ ಆಕ್ರೋಶಗೊಂಡು ಸಿಬ್ಬಂದಿಯ ಸಮವಸ್ತ್ರ ಹಿಡಿದು ಎಳೆದಾಡಿ, ಕತ್ತು ಹಿಡಿದು ಹಲ್ಲೆ ನಡೆಸಿದರೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪರಿಸ್ಥಿತಿ ಗಂಭೀರವಾಗುತ್ತಿದ್ದಂತೆ ಇತರೆ ಪೊಲೀಸ್ ಸಿಬ್ಬಂದಿ ಮಧ್ಯಪ್ರವೇಶಿಸಿ ನಿಯಂತ್ರಣಕ್ಕೆ ಮುಂದಾದರು. ನಂತರ ಆರೋಪಿತರು ಬಸ್‌ಸ್ಟ್ಯಾಂಡ್ ಬಳಿ ಮತ್ತೊಮ್ಮೆ ವಾಹನ ನಿಲ್ಲಿಸಿ ಸಾರ್ವಜನಿಕ ಸಂಚಾರಕ್ಕೆ ಅಡಚಣೆ ಉಂಟುಮಾಡಿದರು. ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಸಿಪಿಐ ಮೇಲೆಯೂ ದೌರ್ಜನ್ಯ ನಡೆಸಿ, ಸಮವಸ್ತ್ರದ ಬಟನ್ ಹರಿದು ತಳ್ಳಾಟ ನಡೆಸಿದ ಘಟನೆ ನಡೆದಿದೆ ಎಂದು ತಿಳಿದುಬಂದಿದೆ. ಘಟನೆಯ ವೇಳೆ ಮಹಿಳಾ ಪೊಲೀಸ್ ಸಿಬ್ಬಂದಿಯ ಮೇಲೂ ಹಲ್ಲೆ ನಡೆದಿರುವುದಾಗಿ ಹೇಳಲಾಗಿದೆ. ಬಳಿಕ ಪೊಲೀಸರು ಆರೋಪಿತರನ್ನು ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಹೋಗಿ ವಿಚಾರಣೆ ನಡೆಸಿದರು. ವಿಚಾರಣೆಯಲ್ಲಿ ಆರೋಪಿತರನ್ನು ಶಿವಪ್ಪ ಲಮಾಣಿ, ಸೈಮನ್ ಲಮಾಣಿ ಮತ್ತು ಸುಮಿತ್ರಾ ಲಮಾಣಿ ಎಂದು ಗುರುತಿಸಲಾಗಿದೆ. ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸುವುದು, ಹಲ್ಲೆ, ಅವಾಚ್ಯ ಶಬ್ದ ಬಳಕೆ ಹಾಗೂ ಕೊಲೆ ಯತ್ನ ಆರೋಪಗಳಡಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಗಾಯಗೊಂಡ ಪೊಲೀಸ್ ಸಿಬ್ಬಂದಿಯನ್ನು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಗ್ರಾಮೀಣ ಭಾಗದ ಕ್ರೀಡೆಗಳು ಮತ್ತು ಪ್ರತಿಭೆಗಳು ಬೆಳಯಬೇಕು :ವಿನಯ ತಿಮ್ಮಾಪೂರ



ನೈಜ್ಯ ದೆಸೆ ನ್ಯೂಸ್

**ಮುಧೋಳ: ಹದಿನಾಲ್ಕು ವರ್ಷದೊಳಗಿನ ಕುಸ್ತಿ ಪಂದ್ಯಾವಳಿಗಳಲ್ಲಿ ಅಪ್ರತಿಮ ಸಾಧನೆ ಮಾಡುತ್ತಿರುವ ಪ್ರತಿಭಾವಂತ ಬಾಲಕ ಮಲ್ಲಿಕಾರ್ಜುನ ಚಿಂಚಲಿಗೆ ಮುಧೋಳ ಕಾಂಗ್ರೆಸ್ ಕಾರ್ಯಾಲಯದಲ್ಲಿ ಅಭಿನಂದಿಸಲಾಯಿತು.**

ಕರ್ನಾಟಕ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ವಿನಯ ತಿಮ್ಮಾಪೂರ ಅವರು ಮಲ್ಲಿಕಾರ್ಜುನನ ಸಾಧನೆಯನ್ನು ಗುರುತಿಸಿ, ಶಾಲು ಹೊದಿಸಿ ಸನ್ಮಾನಿಸಿದರು. ಕೇವಲ ಗೌರವ ಸಲ್ಲಿಸುವುದಕ್ಕೆ ಸೀಮಿತವಾಗದೆ, ಬಾಲಕನ ಕ್ರೀಡಾ ಭವಿಷ್ಯಕ್ಕೆ ನೆರವಾಗಲೆಂದು ವೈಯಕ್ತಿಕವಾಗಿ ಧನಸಹಾಯ ನೀಡಿ ಪ್ರೋತ್ಸಾಹಿಸಿದರು. ಕ್ರೀಡಾ ಸಾಧನೆಗೆ ಬೆಂಬಲದ ಅಗತ್ಯ ಈ ಸಂದರ್ಭದಲ್ಲಿ ಮಾತನಾಡಿದ ವಿನಯ ತಿಮ್ಮಾಪೂರ ಅವರು, "ಗ್ರಾಮೀಣ ಭಾಗದ ಪ್ರತಿಭೆಗಳು ಕ್ರೀಡಾ ಕ್ಷೇತ್ರದಲ್ಲಿ ದೇಶ ಮಟ್ಟದಲ್ಲಿ ಮಿಂಚುತ್ತಿರುವುದು ಹೆಮ್ಮೆಯ ವಿಷಯ. 14 ವರ್ಷದ ಬಾಲಕ ಮಲ್ಲಿಕಾರ್ಜುನ ಕುಸ್ತಿಯಲ್ಲಿ ತೋರುತ್ತಿರುವ ಚಾಕಚಕ್ಯತೆ ಅದ್ಭುತವಾಗಿದೆ. ಇಂತಹ ಕ್ರೀಡಾಪಟುಗಳಿಗೆ ಸೂಕ್ತ ತರಬೇತಿ ಮತ್ತು ಆರ್ಥಿಕ ನೆರವು ಸಿಕ್ಕರೆ ಒಲಿಂಪಿಕ್ಸ್‌ವರೆಗೂ ಬೆಳೆಯಬಲ್ಲರು," ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

"ಪ್ರತಿಭಾವಂತ ಕ್ರೀಡಾಪಟುಗಳು ಆರ್ಥಿಕ ಮುಗ್ಗಟ್ಟಿನಿಂದ ಕ್ರೀಡೆಯಿಂದ ದೂರ ಉಳಿಯಬಾರದು. ಮಲ್ಲಿಕಾರ್ಜುನನ ಮುಂದಿನ ಕ್ರೀಡಾ ಪಯಣಕ್ಕೆ ನಮ್ಮ ಬೆಂಬಲ ಸದಾ ಇರಲಿದೆ." ವಿನಯ ತಿಮ್ಮಾಪೂರ,ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಯುವ ಕಾಂಗ್ರೆಸ್. ಈ ಸಂದರ್ಭದಲ್ಲಿ ಪಕ್ಷದ ಪ್ರಮುಖ ಮುಖಂಡರು, ಕಾರ್ಯಕರ್ತರು ಹಾಗೂ ಕ್ರೀಡಾ ಅಭಿಮಾನಿಗಳು ಉಪಸ್ಥಿತರಿದ್ದರು.

## ತಿಮ್ಮಪ್ಪನ ಸನ್ನಿಧಿಯಲ್ಲಿ ಮತ್ತೆ ನಂದಿನಿ ತುಪ್ಪದ ಘಮಲು

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ವಿಶ್ವಪ್ರಸಿದ್ಧ ತಿರುಪತಿ ತಿಮ್ಮಪ್ಪನ ಸನ್ನಿಧಿಯಲ್ಲಿ ಮತ್ತೆ ನಂದಿನಿ ತುಪ್ಪದ ಸುಗಂಧ ಹರಡಲಿದ್ದು, ತಿರುಪತಿ ಲಡ್ಡು ತಯಾರಿಕೆಗೆ ಕರ್ನಾಟಕದ ಹೆಮ್ಮೆಯ 'ನಂದಿನಿ' ತುಪ್ಪ ಮರುಪ್ರವೇಶ ಮಾಡಿದೆ.**

ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟ ವತಿಯಿಂದ ತಿರುಪತಿ ದೇವಸ್ಥಾನದ ಜೊತೆಗಿನ ಒಪ್ಪಂದಕ್ಕೆ ಮರುಜೀವ ಸಿಕ್ಕಿದ್ದು, ಒಟ್ಟು ಸುಮಾರು 20 ಲಕ್ಷ ಕೆಜಿ ನಂದಿನಿ ತುಪ್ಪವನ್ನು ತಿರುಪತಿಗೆ ರವಾನಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಡೇರಿ ಆವರಣದಲ್ಲಿ ಲಾರಿಗಳಿಗೆ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಲಾಯಿತು. ಬಮೂಲ್ ಅಧ್ಯಕ್ಷ ಡಿಕೆ ಸುರೇಶ್ ಮಾತನಾಡಿ, ನಂದಿನಿ ಬ್ರಾಂಡ್ ರಾಜ್ಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶ್ವಾಸ ಗಳಿಸಿದೆ. ಕಳೆದ 3–4 ವರ್ಷಗಳಿಂದ ತುಪ್ಪವನ್ನು ತಿರುಪತಿಗೆ ಸರಬರಾಜು ಮಾಡುತ್ತಿದ್ದೇವೆ. ಈ ಬಾರಿ ಬಮೂಲ್ ವತಿಯಿಂದ ಪ್ರತ್ಯೇಕವಾಗಿ 6 ತಿಂಗಳ ಗುತ್ತಿಗೆ ಪಡೆದಿದ್ದೇವೆ.



ಸುಮಾರು 136 ಕೋಟಿ ಮೌಲ್ಯದ ಟೆಂಡರ್ ಒಪ್ಪಿಕೊಂಡಿದ್ದು, ಪ್ರತಿದಿನ ಸುಮಾರು 11 ಟನ್ ತುಪ್ಪ ಕಳುಹಿಸಲಾಗುತ್ತದೆ. ಗುಣಮಟ್ಟದ ವಿಷಯದಲ್ಲಿ ಯಾವುದೇ ರಾಜಿ ಇಲ್ಲ. ಡಿಜಿಟಲ್ ಲಾಕರ್ ವ್ಯವಸ್ಥೆ ಮೂಲಕ ಸುರಕ್ಷಿತ ಸಾಗಣೆ ಮಾಡಲಾಗುತ್ತದೆ ಎಂದು ತಿಳಿಸಿದರು..ಇನ್ನೂ ಮಾರುಕಟ್ಟೆಯಲ್ಲಿ ಕಲಬೆರಿಕೆ ತುಪ್ಪ ಹೆಚ್ಚುತ್ತಿರುವ ಹಿನ್ನೆಲೆ, ನಂದಿನಿ ಹೆಸರಿನಲ್ಲಿ ನಕಲಿ ಉತ್ಪನ್ನ ಮಾರಾಟ ಮಾಡುವವರ ವಿರುದ್ಧ ದೂರು ದಾಖಲಿಸಲಾಗಿದೆ. ನಂದಿನಿ ಬ್ರ್ಯಾಂಡ್ ವಿಶ್ವಾಸಾರ್ಹತೆಯನ್ನು ಉಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಇದಲ್ಲದೆ, ಕೆಎಂಎಫ್ ದಿನಕ್ಕೆ ಒಂದು ಕೋಟಿಗೂ ಹೆಚ್ಚು ಲೀಟರ್ ಹಾಲು ಸಂಗ್ರಹಿಸುತ್ತಿದ್ದು, ಬಮೂಲ್‌ನಲ್ಲಿ 17.5 ಲಕ್ಷ ಲೀಟರ್ ಸಂಗ್ರಹವಾಗುತ್ತಿದೆ. ಮುಂದಿನ ದಿನಗಳಲ್ಲಿ ಇದನ್ನು 22–23 ಲಕ್ಷ ಲೀಟ-ರ್‌ಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಹಾಲು ಉತ್ಪಾದಕರಿಗೆ ಉತ್ತೇಜನ ನೀಡುವ ಉದ್ದೇಶದಿಂದ, ಒಂದು ಹಸುವಿಗೆ 90 ಸಾವಿರ, ಎರಡು ಹಸುಗಳಿಗೆ 2 ಲಕ್ಷವರೆಗೆ ಸಾಲ, ಮಿನಿ ಡೈರಿಗಳಿಗೆ 15 ಲಕ್ಷವರೆಗೆ ಸಾಲವನ್ನು 3% ಬಡ್ಡಿದರದಲ್ಲಿ ನೀಡುವ ಯೋಜನೆ ರೂಪಿಸಲಾಗಿದೆ. ಸುಮಾರು 10 ಸಾವಿರ ಕುಟುಂಬಗಳಿಗೆ ಇದರ ಲಾಭ ನೀಡುವ ಗುರಿ ಹೊಂದಲಾಗಿದೆ.

ಇದೇ ವೇಳೆ, ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ 150 ನಂದಿನಿ ಪಾರ್ಲರ್ ತೆರೆಯುವ ಯೋಜನೆ ಕೂಡ ರೂಪಿಸಲಾಗಿದೆ. ತಿರುಪತಿ ಲಡ್ಡುವಿಗೆ ನಂದಿನಿ ತುಪ್ಪ ಮರಳಿರುವುದು ಕನ್ನಡಿಗರಿಗೆ ಮತ್ತೊಂದು ಹೆಮ್ಮೆ ತಂದಿದ್ದು, ರಾಜ್ಯದ ಹಾಲು ಉತ್ಪಾದಕ-ರಿಗೆ ಹೊಸ ಆತ್ಮವಿಶ್ವಾಸ ತುಂಬಿದೆ. ಈ ಸಂದರ್ಭದಲ್ಲಿ ಅಧಿಕಾರಿಗಳು ಉಪಸ್ಥಿತರಿದ್ದರು.

## ಜಾಮೀನು ಕೋರಿ ನಟ ದರ್ಶನ್ ಸುಪ್ರೀಂಗೆ ಮೊರೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ನಟ ದರ್ಶನ್ ಜಾಮೀನು ಕೋರಿ ಸುಪ್ರೀಂಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದಾರೆ. ಸಾಕ್ಷ್ಯ ವಿಚಾರಣೆ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಜಾಮೀನು ಕೋರಿ ನಟ ದರ್ಶನ್ ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.ಕಳೆದ ಏ.14 ರಂದೇ ನಟ ದರ್ಶನ್ ಅವರು ಸುಪ್ರೀಂಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದಾರೆ.**



ಸಾಕ್ಷಿಗಳ ವಿಚಾರಣೆ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂಬ ಕಾರಣವನ್ನು ಮುಂದಿಟ್ಟುಕೊಂಡು ಈ ಬಾರಿ ಸುಪ್ರೀಂ ಕೋರ್ಟ್‌ನಲ್ಲಿ ಜಾಮೀನು ಕೋರಲಾಗಿದೆ. ಕಳೆದ ಏಪ್ರಿಲ್ 14 ರಂದೇ ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಕೆಯಾಗಿದೆ. ಈ ಹಿಂದೆ ಕರ್ನಾಟಕ ಹೈಕೋರ್ಟ್‌ನಲ್ಲಿ ಜಾಮೀನು ಅರ್ಜಿ ತಿರಸ್ಕೃತಗೊಂಡಿದ್ದರಿಂದ, ಇದೀಗ ದೇಶದ ಅತ್ಯುನ್ನತ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಮುಂದಿನ ಹಂತವೇನು : ಸಾಮಾನ್ಯವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾದ ನಂತರ, ಅದು ವಿಚಾರಣೆಗೆ ಪಟ್ಟಿಯಾಗಲು ಕೆಲವು ದಿನಗಳ ಸಮಯ ತೆಗೆದುಕೊಳ್ಳುತ್ತದೆ. ನ್ಯಾಯಪೀಠವು ಈ ಅರ್ಜಿಯನ್ನು ಕೈಗೆತ್ತಿಕೊಂಡಾಗ, ತನಿಖಾ ಸಂಸ್ಥೆಗಳಿಗೆ ನೋಟಿಸ್ ನೀಡಿ ಅವರ ಅಭಿಪ್ರಾಯವನ್ನೂ ಕೇಳುವ ಸಾಧ್ಯತೆಯಿದೆ.

## ನವ ಜೋಡಿಗಳಿಂದ ಮೊಬೈಲ್ ಬಿಡಿ ಪುಸ್ತಕ ಇಡಿ ಅಭಿಯಾನ ಜನ ಜಾಗೃತಿ




ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ಕುಷ್ಟಗಿಯಲ್ಲಿ ನಡೆದ ಶಟ್ಟರ್ ಕುಟುಂಬದ ಮದುವೆ ಸಂಭ್ರಮದ ಸಮಾರಂಭದಲ್ಲಿ ನವ ವಧು-ವರರು ಮೊಬೈಲ್ ಬಿಡಿ ಪುಸ್ತಕ ಹಿಡಿ ಅಭಿಯಾನ ಜಾಗೃತಿ ಮೂಡಿಸಿ ಗಮನ ಸೆಳೆದರು.**

ಬುಧವಾರ ಇಲ್ಲಿನ ಪಿಸಿಎಚ್ ಪ್ಯಾಲೇಸ್ ನಲ್ಲಿ ಮದುವೆ ಸಂಭ್ರಮದಲ್ಲಿ ನೂತನ ವಧು-ವರರಾದ ದರ್ಶನ್ ಶೆಟ್ಟರ್-ಚೈತ್ರ ಅವರು ಮೊಬೈಲ್ ಬಿಡಿ ಪುಸ್ತಕ ಹಿಡಿ ಅಭಿಯಾನ ಜಾಗೃತಿ ಎಂಬ ಬರಹಗಳನ್ನು ಪ್ರದರ್ಶಿಸಿ ಗಮನ ಸೆಳೆದರು. ಮದುವೆಗೆ ಬಂದ ಕುಟುಂಬದವರು, ಸಂಬಧಿಕರು ಸ್ನೇಹಿತರು ಈ ಮಾದರಿ ಮದುವೆಯ ಈ ಸಂದೇಶವನ್ನು ಮೆಚ್ಚಿಕೊಂಡರಲ್ಲದೇ ವಿಶೇಷವಾಗಿ ಜಾಗೃತಿ ಮಾಡಿರುವ ಕಾರ್ಯ ಶ್ಲಾಘನೀಯ ವಧುವರು ಮಾತನಾಡಿ ಇಂದಿನ ಯುಗದಲ್ಲಿ ಮೊಬೈಲ್ ಫೋನ್ ನಮ್ಮ ಜೀವನದ ಅವಿಭಾಜ್ಯ ಭಾಗವಾಗಿದೆ. ಮಕ್ಕಳು ಮತ್ತು ಯುವಕರು ಹೆಚ್ಚು ಸಮಯವನ್ನು ಮೊಬೈಲ್‌ನಲ್ಲಿ ಕಳೆಯುತ್ತಾರೆ.

ಆಟಗಳು, ಸಾಮಾಜಿ-ಕ ಜಾಲತಾಣಗಳು ಮತ್ತು ವಿಡಿಯೋಗಳನ್ನು ನೋಡುವುದರಿಂದ ಅವರು ಪುಸ್ತಕ ಓದುವುದನ್ನು ಮರೆಯುತ್ತಿದ್ದಾರೆ. ಆದ್ದರಿಂದ "ಮೊಬೈಲ್ ಬಿಡಿ, ಪುಸ್ತಕ ಹಿಡಿ" ಎಂಬ ಸಂದೇಶ ಬಹಳ ಮಹತ್ವದ್ದು. ಪುಸ್ತಕಗಳು ನಮ್ಮ ಉತ್ತಮ ಸ್ನೇಹಿತರು. ಅವು ನಮಗೆ ಜ್ಞಾನವನ್ನು ಕೊಡುತ್ತವೆ, ಉತ್ತಮ ಚಿಂತನೆಗಳನ್ನು ಬೆಳೆಸುತ್ತವೆ ಮತ್ತು ನಮ್ಮ ಭವಿಷ್ಯವನ್ನು ಬೆಳಗಿಸುತ್ತವೆ. ಪುಸ್ತಕಗಳನ್ನು ಓದುವುದರಿಂದ ನಮ್ಮ ಭಾಷಾ ಕೌಶಲ್ಯ ಹೆಚ್ಚುತ್ತದೆ, ಕಲ್ಪನಾ ಶಕ್ತಿ ವೃದ್ಧಿಯಾಗುತ್ತದೆ ಮತ್ತು ಮನಸ್ಸು ಏಕಾಗ್ರವಾಗುತ್ತದೆ ಎಂದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.